ಅಪರಂಜಿ

ನವೆಂಬರ್ 2004

ತಿಳಿನಗೆಯ ಕಾರಂಜಿ



ಪ್ರಕಾಶ್

ಶಿವಕುಮಾರ್

ಎಲ್.ಎಸ್. ಶೇಷಗಿರಿ ರಾವ್

ಜೇನ್ ಆಸ್ಟಿನ್

ಹಾ.ರಾ.

ಬಿ.ಎಚ್. ಕುಲಕರ್ಣಿ

ಆನಂದ

ಶ್ಯಾಮಲಾ ರವಿಶಂಕರ್

ಕೆ.ವಿ. ಐಯ್ಯರ್

ಎಚ್. ಗೋಪಾಲಕೃಷ್ಣ

ಬಾಗೂರು ಚಂದ್ರು

ಎಚ್. ಗೋಪಾಲಕೃಷ್ಣ

ಸುಜಾತ ರಾಜಣ್ಣ

ಬಿಡಿ ಪ್ರತಿ: ರೂ. 10.00





ಗೌರವ ಸಲಹೆಗಾರರು:
ಶ್ರೀ ಅ.ರಾ.ಸೇ.
ಶ್ರೀ ಶೇಷಗಿರಿ

ಸಂಪಾದಕ:
ಶಿವಕುಮಾರ್

ಉಪ ಸಂಪಾದಕ:
ಬೇಲೂರು ರಾಮಮೂರ್ತಿ

ಚಂದಾ ವಿವರ:
ಬಿಡಿ ಪ್ರತಿ: ರೂ. 10.00
ವಾರ್ಷಿಕ ಚಂದಾ ರೂ. 100
ಹತ್ತು ವರ್ಷದ ಚಂದಾ ರೂ. 750
Ph: 23345259
email: aparanji@hotmail.com
website: aparanjimag.com

ವಿಳಾಸ: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 22 ನವೆಂಬರ್ - 2004 ಸಂಚಿಕೆ - 2

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್, ಬೆಂಗಳೂರು - 27



○ ಪ್ರಕಾಶ್

ದೂರದರ್ಶನದಲ್ಲಿ ಕ್ರಿಕೆಟ್ ಪ್ರಸಾರ

- ಸುದ್ದಿ

ಅವು 'ದುರ್ದರ್ಶನ' ಆಗದಿರಲಿ!

★★★

'ಬೆಂಗಳೂರಿನಲ್ಲಿ ಮೊದಲ ಟೆಸ್ಟ್ ಪಂದ್ಯ'

ಹುಷ್! ವರುಣನಿಗೆ ಕೇಳಿಸೀತು!!

★★★

ಅಲ್ಪಸಂಖ್ಯಾತರಿಗೆ ಮೀಸಲಾತಿ; ಕೇಂದ್ರದ ಉತ್ಸಾಹಕ್ಕೆ ತಣ್ಣೀರು

- ಸುದ್ದಿ

ಜನತೆಗೆ ಕಣ್ಣೀರು!!

★★★

ಟೆಂಡೂಲ್ಕರ್‌ಗೆ Tennis Elbow

- ಕ್ರೀಡಾ ಸುದ್ದಿ

ಅರೆ!?

★★★

ಗೆಲ್ಲಲು ಹೆಚ್ಚು ರನ್ ಅಗತ್ಯ

- ಗಂಗೂಲಿ

ಈ ಹೇಳಿಕೆ ಗಂಗೂಗ್ಲಿ ಅನ್ನಬಹುದು!

★★★

ಆಮೆ ಗತಿಯಲ್ಲಿ ಕಾಮಗಾರಿ; ಬಿ.ಜೆ.ಪಿ. ಪ್ರತಿಭಟನೆ

- ಸುದ್ದಿ

ಇದನ್ನ ಆಮೆಗಳ ಸಂಘ ತೀವ್ರವಾಗಿ ಖಂಡಿಸಿದೆಯಂತೆ!!


★★★

ಆರೋಗ್ಯ ಇಲಾಖೆ ಹಗರಣ

- ಸುದ್ದಿ

ಇದಕ್ಕೆ ಮದ್ದೇ ಇಲ್ಲವೆ?

★★★



ಕಾರ್ಟೂನ್, ಕಾರ್ಟೂನ್

- ಶಿವು


ಮೊನ್ನೆ ಇಂಟರ್ನೆಟ್ಟಿನಲ್ಲಿ ಕಣ್ಣಾಡಿಸುತ್ತಿದ್ದಾಗ ಪಂಚ್ ವೆಬ್‌ಸೈಟಿನಲ್ಲಿ ಕುತೂಹಲ ಮೂಡಿಸುವ ಮಾಹಿತಿಯೊಂದು ಕಂಡುಬಂತು. ಕಾರ್ಟೂನ್ ಎಂಬ ಪದ ಮೊದಲು ಬಳಕೆಗೆ ಬಂದಿದ್ದು ಯಾವಾಗ ಅಂತ ಗೊತ್ತೇ ನಿಮಗೆ ? ಇಲ್ಲಾ ಅಂದ್ರಾ, ಹೇಳ್ತೀನಿ ಕೇಳಿ.

ಇದೆಲ್ಲಾ ನಡೆದದ್ದು ಹತ್ತೊಭತ್ತನೆಯ ಶತಮಾನದ ಮಧ್ಯ ಭಾಗದಲ್ಲಿ. 1837 ರಲ್ಲಿ ಇಂಗ್ಲೆಂಡಿನ ವಿಕ್ಟೋರಿಯಾ ರಾಣಿಯ ಕಿರೀಟ ಧಾರಣೆಯಾದ ನಾಲ್ಕು ವರ್ಷಗಳ ನಂತರ 1841ರಲ್ಲಿ ಪಂಚ್ ವಾರ ಪತ್ರಿಕೆಯ ಪ್ರಕಟಣೆ ಪ್ರಾರಂಭವಾಯಿತು. ಪ್ರಾರಂಭದ ದಿನಗಳಲ್ಲಿ ಈಗ ನಮಗೆ ತಿಳಿದಿರುವ ರೂಪದ ವ್ಯಂಗ್ಯಚಿತ್ರಗಳೇನೂ ಇರುತ್ತಿರಲಿಲ್ಲ. ಬದಲಿಗೆ ಮಿ. ಪಂಚ್‌ಸ್ ಪೆನ್ಸಿಲಿಂಗ್ಸ್ ಎಂಬ ಶೀರ್ಷಿಕೆಯಡಿಯಲ್ಲಿ ಒಂದು ವಿಡಂಬನಾತ್ಮಕ ಚಿತ್ರ ವಾರದ ಮುಖ್ಯ ಅಂಕಣವಾಗಿದ್ದು, ಅದು ಅಂದಿನ ಕಾಲಕ್ಕೆ ಜನಪ್ರಿಯವೂ ಆಗಿತ್ತಂತೆ. ಈ ಚಿತ್ರಗಳನ್ನು 'ದ ಬಿಗ್ ಕಟ್' ಎಂದು ಕರೆಯುತ್ತಿದ್ದರು. ಚಿತ್ರಗಳ ಮುದ್ರಣ ಕಲೆ ಆಗಿನ್ನೂ ಶೈಶವಾವಸ್ಥೆಯಲ್ಲಿತ್ತು. ಚಿತ್ರಕಾರ ನೇರವಾಗಿ ಒಂದು ಮರದ ಹಲ್ಲೆಯ ಮೇಲೆ ತನ್ನ ಚಿತ್ರವನ್ನು ಮೂಡಿಸಿ ನಂತರ ಇದನ್ನು ಮರ ಕೊರೆಯುವವರ ಕೈಯಿಂದ ಕೊರೆಸಿ 'ಬ್ಲಾಕ್' ಅನ್ನು ತಯಾರಿಸಬೇಕಾಗಿತ್ತು. ಚಿತ್ರದ ಯಶಸ್ಸು ಬಹುಮಟ್ಟಿಗೆ ಮರ ಕೊರೆಯುವವನ ಕಸುಬುಗಾರಿಕೆಯನ್ನು ಅವಲಂಬಿಸಿತ್ತು. ಬಹುಶಃ ಈ ಕಾರಣದಿಂದಲೋ ಏನೋ ಈ ದಿನಗಳಲ್ಲಿ ಅತ್ಯಂತ ಜನಪ್ರಿಯ ಚಿತ್ರಕಾರರಾಗಿದ್ದ ಲೀಚ್, ಡಾಯ್ಲ್ ಹಾಗೂ ಕೀನ್ ಇವರುಗಳ ಯಶಸ್ಸಿಗೆ ಈ ಎಲ್ಲರೂ ವೃತ್ತಿಯಲ್ಲಿ ಮರ ಕೊರೆಯುವವರಾಗಿದ್ದದ್ದೂ ಒಂದು ಕಾರಣವಿದ್ದಿರಬಹುದು. ಇರಲಿ.

1834ರಲ್ಲಿ ಬ್ರಿಟನ್ನಿನ ಪಾರ್ಲಿಮೆಂಟ್ ಭವನ ಬೆಂಕಿಯ ಅಪಘಾತಕ್ಕೆ ಗುರಿಯಾಗಿ ಅದು ಭಾಗಶಃ ನಾಶವಾಗಿತ್ತು. 1843ರ ಹೊತ್ತಿಗೆ ಕಟ್ಟಡದ ಪುನರ್ನಿರ್ಮಾಣದ ಕಾರ್ಯ ಬಹುಪಾಲು ಮುಗಿದಿದ್ದು, ಅಂದಿನ ಶಾಸಕರು, ಭವನದ ಒಳಗೋಡೆಗಳನ್ನು ಅಲಂಕರಿಸಲು ವರ್ಣಚಿತ್ರಗಳಿಗೆ ಕರೆ ನೀಡಿದ್ದರು. ಈ ಚಿತ್ರ ರಚನೆಯಲ್ಲಿ ಭಾಗವಹಿಸಲು ಅಪೇಕ್ಷಿಸಿದ ಚಿತ್ರಕಾರರು ತಮ್ಮ ಚಿತ್ರದ ಕರಡು ಪ್ರತಿಯೊಂದನ್ನು ಪಾರ್ಲಿಮೆಂಟ್ ಸಮಿತಿಯೊಂದಕ್ಕೆ ನೀಡಬೇಕಾಗಿತ್ತು. ವರ್ಣಚಿತ್ರ ರಚನೆಗೆ ಮುಂಚಿತವಾಗಿ ಹೀಗೆ ರಚಿಸಿದ ಕರಡು ಪ್ರತಿಯನ್ನು 'ಕಾರ್ಟೂನ್' ಎಂದು ಕರೆಯುತ್ತಿದ್ದರು.

ಆ ದಿನಗಳಲ್ಲಿ ಇಂಗ್ಲೆಂಡಿನಲ್ಲಿ ಬಡತನ ವ್ಯಾಪಕವಾಗಿತ್ತಂತೆ. ಇಂತಹ ಬಡತನದ ನಡುವೆ, ಪಾರ್ಲಿಮೆಂಟ್ ಭವನಕ್ಕೆ ವರ್ಣಚಿತ್ರದ ಅಲಂಕಾರ ಸಲ್ಲದ ಶ್ರೀಮಂತಿಕೆಯ ಪ್ರದರ್ಶನ ಎಂದು ಪಂಚ್‌ನ ಸಂಪಾದಕ ವರ್ಗದ ಅಭಿಮತವಾಗಿತ್ತಂತೆ. ಈ ಕುರಿತು ಒಂದು ವಿಡಂಬನೆಯನ್ನು ಚಿತ್ರವನ್ನು ರಚಿಸಿ, ಅದನ್ನು ತಮ್ಮ ಪತ್ರಿಕೆಯ ಕಾರ್ಟೂನ್ ಕೊಡುಗೆ ಎಂದು ಪಾರ್ಲಿಮೆಂಟಿಗೆ ಕಳುಹಿಸಲು ಪಂಚ್ ನ ಸಂಪಾದಕ ವರ್ಗ ನಿರ್ಧರಿಸಿತಂತೆ. ಈ ಕಾರ್ಟೂನಿನ ರಚನೆಯನ್ನು ಸಂಪಾದಕರು ಚಿತ್ರಕಾರ ಜಾನ್


ಲೀಚ್ ಗೆ ಈ ಕೆಲಸವನ್ನು ಒಪ್ಪಿಸಿದರು. ಜಾನ್ ಲೀಚ್, 'ಸಬ್‌ಸ್ಟನ್ಸ್ ಎಂಡ್ ಷಾಡೋ' ಎಂಬ ಶೀರ್ಷಿಕೆಯಡಿಯಲ್ಲಿ ಒಂದು ಚಿತ್ರ ರಚಿಸಿದ. ಕನ್ನಡದ ಭಾವಾನುವಾದ ಮಾಡಿದಲ್ಲಿ ಇದನ್ನು 'ಟೊಳ್ಳು ಗಟ್ಟಿ' ಎನ್ನಬಹುದೋ ಏನೋ. ಲೀಚ್ ನ ಚಿತ್ರದ ಹಿನ್ನೆಲೆಯಲ್ಲಿ ಅಂದಿನ ಇಂಗ್ಲೆಂಡಿನ ಶ್ರೀಮಂತ ವರ್ಗದ ಜೀವನ ಶೈಲಿಯನ್ನು ಪ್ರತಿನಿಧಿಸುವ ವರ್ಣ ಚಿತ್ರಗಳು. ಮುಂಭಾಗದಲ್ಲಿ ಈ ವರ್ಣ ಚಿತ್ರಗಳನ್ನು ಬೆಕ್ಕಸ ಬೆರಗಾಗಿ ನೋಡುತ್ತಿರುವ ಬಡಜನತೆ. ಈ ನಿರ್ಗತಿಕರಿಗೆ ಊಟ, ವಸತಿಗಳನ್ನು ನೀಡಲಾಗದಿದ್ದರೂ, ವರ್ಣ ಚಿತ್ರದಲ್ಲಿ ಅವರನ್ನು ಚಿತ್ರಿಸಿ, ಆ ಮೂಲಕ ಸರಕಾರ ತನ್ನ ಸಮಾಜ ಭಾದ್ಯತೆಯಿಂದ ನುಣುಚಿಕೊಳ್ಳಲಿ, ಎಂಬ ವಿಡಂಬನೆ, ಲೀಚ್ ನ ಚಿತ್ರದಲ್ಲಿ ಬಹು ಪ್ರಭಾವಶಾಲಿಯಾಗಿ ಮೂಡಿಬಂದಿತ್ತು.



Substance and Shadow

ಪಂಚ್ ಈ ಕಾರ್ಟೂನ್ ಅನ್ನು ಪ್ರಕಟಿಸಿದ ನಂತರ, ಈ ಸರಣಿಯ ವಿಡಂಬನಾತ್ಮಕ ಚಿತ್ರಗಳಿಗೆ ಕಾರ್ಟೂನ್ ಎಂಬ ಹೆಸರೇ ನಿಂತು ಬಿಟ್ಟಿತು. ವಾರಕ್ಕೊಮ್ಮೆ ಒಂದು ಸಂಜೆ, ಪಂಚ್ ನ ಸಂಪಾದಕ ವರ್ಗ ಹಾಗೂ ಚಿತ್ರಕಾರರು, ಎಲ್ಲರೂ ಒಟ್ಟಿಗೆ ಸೇರಿ ಮುಂದಿನ ಸಂಚಿಕೆಯ ಅಂಕಣಗಳು, ಅದಕ್ಕೂ ಮಿಗಿಲಾಗಿ ಪ್ರಕಟಿಸಬೇಕಾದ ಮುಖ್ಯ ಕಾರ್ಟೂನ್ ಬಗ್ಗೆ ವಿವರವಾಗಿ ಚರ್ಚಿಸಿ, ಪತ್ರಿಕೆಯ ರೂಪು ರೇಷೆಗಳನ್ನು ನಿರ್ಧರಿಸುತ್ತಿದ್ದರಂತೆ ಈ ಸಭೆಗಳಲ್ಲಿ ತಿಂಡಿ ತೀರ್ಥಗಳು ಯಥೇಚ್ಛವಾಗಿ ಸರಬರಾಜಾಗುತ್ತಿದ್ದಂತೂ ಚಾರಿತ್ರಿಕವಾಗಿಯೇ ದಾಖಲಾಗಿರುವ ವಿಷಯ. ಕೊರವಂಜಿಯ ಮೊದಲ ದಶಕದಲ್ಲಿಯೂ ಸಹಾ ತಿಂಗಳ ಮೊದಲ ಭಾನುವಾರ ಸಂಜೆ 'ಕೊರವಂಜಿ ಹುಡುಗರು' ನಮ್ಮ ಮನೆಗೆ ಬಂದು ಮುಂದಿನ ತಿಂಗಳ ಸಂಚಿಕೆಯ ಹೂರಣವನ್ನು ಸಿದ್ಧಪಡಿಸುತ್ತಿದ್ದದು ಈ ಸಂದರ್ಭದಲ್ಲಿ ನೆನಪಿಗೆ ಬರುತ್ತದೆ.

ಒಟ್ಟಿನಲ್ಲಿ ಪಂಚ್ ಹುಟ್ಟುಹಾಕಿದ ಈ ಕಾರ್ಟೂನ್ ಸಂಸ್ಕೃತಿ, ನಮ್ಮ ನಾಡಿನಲ್ಲಿ ಇಪ್ಪತ್ತರ ದಶಕದ ಮಧ್ಯಭಾಗದಲ್ಲಿ ಬೇರುಬಿಟ್ಟು, ಈಗ ಹುಲುಸಾದ ಮರವಾಗಿರುವುದು ನಿಜಕ್ಕೂ ಸಂತಸದ ಸಂಗತಿ.



ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಸಾಹಿತ್ಯ

– ಎಲ್.ಎಸ್. ಶೇಷಗಿರಿರಾವ್

ವಿಚಿತ್ರ ಸ್ವಭಾವದ ವ್ಯಕ್ತಿಗಳನ್ನು ಹಾಸ್ಯ ಮಾಡುವ ಸಾಹಿತ್ಯ ಎಲ್ಲ ದೇಶಗಳಲ್ಲಿ, ಎಲ್ಲ ಭಾಷೆಗಳಲ್ಲಿ ಇದೆ. ಆದರೆ ಸಾಮಾನ್ಯವಾಗಿ ಇದು, ಎದ್ದು ಕಾಣುವ ವಿಲಕ್ಷಣಗಳನ್ನು ತೋರಿಸಿ ನಾವು ಗಹಗಹಿಸಿ ನಗುವಂತೆ ಮಾಡುವ ಸಾಹಿತ್ಯ. ಆದರೆ ಈಗ ನಾವು ಓದಲಿರುವುದು ಬಹು ಸೂಕ್ಷ್ಮವಾಗಿ ವಿಲಕ್ಷಣಗಳನ್ನು ತೋರಿಸಿ ತುಟಿಯು ನಗೆಯಲ್ಲಿ ಸ್ವಲ್ಪ ಅರಳುವಂತೆ ಮಾಡುವ ಬರಹ. ಇದು ಇಂಗ್ಲಿಷಿನ ಪ್ರಸಿದ್ಧ ಕಾದಂಬರಿಗಾರ್ತಿ ಜೇನ್ ಆಸ್ಟಿನಳ (1775-1817) 'ಪ್ರೈಡ್ ಅಂಡ್ ಪ್ರೆಜುಡಿಸ್' ಕಾದಂಬರಿಯಿಂದ ಆರಿಸಿದ್ದು. ಪಾದ್ರಿ ಮಿ. ಕಾಲಿನ್ಸ್, ಅವಳ ಒಂದು ಪ್ರಸಿದ್ಧ ಸೃಷ್ಟಿ. ಗೊಂಬೆ ಮಾಡಿದವನು ಗೊಂಬೆಯನ್ನು ಬೆಳಕಿನಲ್ಲಿ ಹೀಗೆ ಹಿಡಿದು, ಹಾಗೆ ತಿರುಗಿಸಿ ಹಿಡಿದು, ಮತ್ತೆ ತಿರುಗಿಸಿ ಹಿಡಿದು ತೋರಿಸುವಂತೆ ಜೇನ್ ಆಸ್ಟಿನ್ ಈ ಪಾತ್ರವನ್ನು ಖುಷಿಯಾಗಿ ಪ್ರದರ್ಶಿಸುತ್ತಾಳೆ. ಸೂಕ್ಷ್ಮವಾಗಿ ಓದಿದಷ್ಟು ಈ ಪಾತ್ರದ 'ಅಬ್‌ಸರ್ಡಿಟಿ' ಖುಷಿ ಕೊಡುತ್ತದೆ. ಸಂಪತ್ತು, ಪ್ರತಿಷ್ಠೆಗಳನ್ನು ವಿರೋಧಿಸಿದ ಏಸುಕ್ರಿಸ್ತನ ಉಪದೇಶವನ್ನು ಜನರಿಗೆ ತಿಳಿಸಿಕೊಡುವ ವೃತ್ತಿಯನ್ನು ಆರಿಸಿಕೊಂಡ ಇವನು ಸಂಪತ್ತು, ಪ್ರತಿಷ್ಠೆಗಳ ಆರಾಧಕ. ಹುಟ್ಟು ... ಇವನು. ಅತ್ಯಂತ 'ಫಾರ್ಮಲ್' ಆಗಿ, ಶಿಷ್ಟಾಚಾರವನ್ನನುಸರಿಸಿ ಮಾತನಾಡುವ ಇವನಿಗೆ ವಾಸ್ತವವಾಗಿ ಸಂಸ್ಕೃತಿಯ ಗಂಧವೇ ಇಲ್ಲ. ಎಲಿಸಬೆತ್ ಎಂಬ ಬಹು ಲವಲವಿಕೆಯ ಜಾಣ ಹುಡುಗಿಯನ್ನು ಇವನು 'ನನ್ನನ್ನು ಮದುವೆಯಾಗು' ಎಂದು, ಅಂದಿನ ಪಾಶ್ಚಾತ್ಯ ಸಮಾಜದ ಶಿಷ್ಟಾಚಾರಕ್ಕೆ ಅನುಗುಣವಾಗಿ ಇವನು ಕೇಳುತ್ತಿದ್ದಾನೆ. 'ಪ್ರಪೋಸ್' ಮಾಡುತ್ತಿದ್ದಾನೆ. ಈ ದಡ್ಡನಿಗೆ ಇಂಥ ಸನ್ನಿವೇಶದಲ್ಲಿ ಮೊದಲು ಹುಡುಗಿ ನಿರೀಕ್ಷಿಸುವುದು ಪ್ರಣಯ, ಹೇಳಬೇಕಾದದ್ದು, ''ನಾನು ನಿನ್ನನ್ನು ಬಹಳ ಪ್ರೇಮಿಸುತ್ತೇನೆ' ಎಂದೂ ಇವನಿಗೆ ಗೊತ್ತಿಲ್ಲ. ಮದುವೆ ಮಾಡಿಕೊಳ್ಳಲು ಕಾರಣಗಳಿವೆ ಎಂದು ಪಟ್ಟಿ ಮಾಡುತ್ತ ಹೋಗುತ್ತಾನೆ. ಮದುವೆ ಮಾಡಿಕೊಳ್ಳಲು ಬಯಸಲು ಒಂದೇ ಕಾರಣ, ಅದು ಪ್ರೇಮ ಎಂದು ಅವನಿಗೆ ಹೊಳೆಯುವುದಿಲ್ಲ. ಅವಳು ಇವನನ್ನು ಮದುವೆಯಾಗಲು ಒಪ್ಪುವುದಿಲ್ಲ ಎಂದರೆ ನಂಬಿಕೆಯೇ ಇಲ್ಲ ಇವನಿಗೆ. ತಾನು, ಮಿ. ಕಾಲಿನ್ಸ್ ತನ್ನನ್ನು ಮದುವೆಯಾಗಲು ಯಾವ ಹುಡುಗಿಯಾದರೂ ಒಪ್ಪದಿರುವುದು ಸಾಧ್ಯ ಎಂದೇ ಅವನಿಗೆ ಅನ್ನಿಸುವುದಿಲ್ಲ. 'ಪ್ರಾಯಶ: ಇನ್ನೂ ಯಾರೂ ನನ್ನನ್ನು ಮದುವೆ ಮಾಡಿಕೊಳ್ಳಲು ಮುಂದೆ ಬರುವುದಿಲ್ಲ' ಎಂದು, ತಾನು ಪ್ರೇಮಿಸಿದೆ ಎನ್ನುವ ಯುವತಿಗೆ ಹೇಳುವುದು ಅಪಮಾನ ಎಂಬ ಅರಿವೂ ಇವನಿಗಿಲ್ಲ. 'ನನಗೆ ಹಣದ ಯೋಚನೆ ಇಲ್ಲ' ಎನ್ನುತ್ತಲೇ ಮುಂದಿನ ಮಾತು, ಶೇ. 45 ಬಡ್ಡಿಯ ಒಂದು ಸಾಲಿನ ಮುಂದಿನದು.

ಇದು ಸಂಪೂರ್ಣವಾಗಿ comedy of character. ಆಗಲೇ ಹೇಳಿದಂತೆ, ಗಟ್ಟಿಯಾದ ನಗು ಬರಿಸುವುದಿಲ್ಲ. ಆದರೆ ಮಾತಿನ ವೈಖರಿಯಲ್ಲಿ ಸಂಸ್ಕೃತಿ ತೋರಿಸುವ ಕಾಲಿನ್ಸ್‌ನ 'ಪಾಂಪಾಸಿಟಿ', ಅಹಂ ಭಾಷೆ, ಮೂರ್ಖತನಗಳು ಅವನ ಮಾತುಗಳಲ್ಲೆ ಅನಾವರಣವಾಗುತ್ತ ಹೋದಂತೆ ಓದುಗನಿಗೆ ತಮಾಷೆಯಾಗಿ ಕಂಡು ಅವನ ತುಟಿಗಳು ಮುಗುಳ್ನಗೆಯಲ್ಲಿ ಅರಳುತ್ತವೆ.

ಪ್ರೈಡ್ ಎಂಡ್ ಪ್ರಿಜುಡಿಸ್

ಮೂಲ: ಜೇನ್ ಆಸ್ಟಿನ್

ಕನ್ನಡಕ್ಕೆ: ಎಲ್.ಎಸ್. ಶೇಷಗಿರಿರಾವ್

(ಬೆನೆಟ್ ಕುಟುಂಬದಲ್ಲಿ ಆತ ಅವನ ಹೆಂಡತಿ ಐದು ಮಂದಿ ಹೆಣ್ಣುಮಕ್ಕಳು. ಗಂಡು ಮಕ್ಕಳಿಲ್ಲ. ಯಾವುದೋ ನಿಯಮದ ಪ್ರಕಾರ ಬೆನೆಟ್ ತೀರಿಕೊಂಡರೆ ಅವನ ಆಸ್ತಿ ಗಂಡು ಸಂತಾನಕ್ಕೆ ಎಂದರೆ ಅವನ ನೆಂಟ ವಿಲಿಯಂ ಕಾಲಿನ್ಸ್‌ಗೆ ಹೋಗುತ್ತದೆ. ಕಾಲಿನ್ಸ್ ಪಾದ್ರಿ. Pompres ಸ್ವಪ್ರತಿಷ್ಠೆ, ತನ್ನ ವಿಷಯದಲ್ಲಿ ಅತ್ಯಂತ ಹೆಮ್ಮೆ ಸಂಭ್ರಮ ತೃಪ್ತಿ. ಮಾತು ವಿಪರೀತ formal, correct ಔಪಚಾರಿಕ, ಶಿಷ್ಟಾಚಾರದಿಂದ ಹುಲ್ಲಿನೆಸಳಷ್ಟು ಅತ್ತಿತ್ತ ಸರಿಯದು. ತಾನು ಹಾಸ್ಯಾಸ್ಪದ ಎನ್ನುವ ಅನುಮಾನದ ನೆರಳಿನ ನೆರಳೂ ಅವನ ಬಳಿ ಸುಳಿಯದು. ತನ್ನ ಸ್ವಭಾವದಲ್ಲಿಯೇ ಅವನಿಗೆ ಸಡಗರ, ಸಂಭ್ರಮ. ಅವನು ಬೆನೆಟ್‌ನ ಮನೆಗೆ ಬರುತ್ತಾನೆ. ಆ ಸಂಸಾರದ ಒಬ್ಬ ಹುಡುಗಿಯನ್ನು ಮದುವೆ ಯಾಗುವುದು ಅವನ ಉದ್ದೇಶ. ಮೊದಲನೆಯ ಹುಡುಗಿ ಜೇನ್. ಅವಳನ್ನು ಮದುವೆಯಾಗುತ್ತೇನೆ ಎನ್ನುತ್ತಾನೆ. ಅವಳಿಗೆ ಮದುವೆ ಗೊತ್ತಾಗಿದೆ ಎಂದು ತಿಳಿಯುತ್ತಲೇ ಎರಡನೆಯ ಹುಡುಗಿ ಎಲಿಸಬೆತ್‌ಳನ್ನು ಮದುವೆಯಾಗಲು ತೀರ್ಮಾನಿಸುತ್ತಾನೆ. ಅವಳು ಜೇನ್‌ಳಷ್ಟು ಸುಂದರಿ ಅಲ್ಲದಿದ್ದರೂ ಸುಂದರಿಯೇ ಬಹು ತೀಕ್ಷ್ಣ ಬುದ್ಧಿಯ ಹುಡುಗಿ. ಎರಡು ದಿನಗಳಲ್ಲಿಯೇ ಅವಳಿಗೆ ಕಾಲಿನ್ಸ್ ಹಾಸ್ಯಾಸ್ಪದನಾಗಿ ಕಂಡಿದ್ದಾನೆ. ಅವನಿಗಾದರೋ ಜಗತ್ತಿನ ಯಾವ ಹೆಣ್ಣಿಗಾದರೂ ತನ್ನ ಕೈ ಹಿಡಿಯುವುದೊಂದು ಭಾಗ್ಯ, ಯಾವ ಹೆಣ್ಣಾದರು ತಾನು 'ನನ್ನನ್ನು ಮದುವೆಯಾಗು' ಎಂದು ಕೇಳಿದರೆ ಸಂತೋಷದಿಂದ ಕುಣಿಯುತ್ತಾಳೆ ಎಂಬ ವಿಶ್ವಾಸ. ಮುಂದಿನ ದೃಶ್ಯದಲ್ಲಿ ಕಾಲಿನ್ಸ್ ಎಲಿಸಬೆತ್ ಇಬ್ಬರೂ ಇದ್ದಾರೆ - ಅವನು ಮದುವೆ 'ಪ್ರಪೋಸ್' ಮಾಡುತ್ತಿದ್ದಾನೆ, ಎಂದರೆ 'ನನ್ನನ್ನು ಮದುವೆಯಾಗು' ಎಂದು ಕೇಳುತ್ತಿದ್ದಾನೆ. ಅಂದಿನ ಸಮಾಜದಲ್ಲಿ ಗಂಡಸು 'ಪ್ರಪೋಸ್' ಮಾಡುವುದು ಪದ್ಧತಿ, ತನ್ನನ್ನು ಅವಳು ಒಪ್ಪಿದರೆ ತನಗೆ ದೊಡ್ಡ ಗೌರವ ಎಂದು ನಮ್ರತೆಯಿಂದ ಹೇಳುವುದೂ ಪದ್ಧತಿ. ಹೀಗೆ ಹೇಳುತ್ತಲೇ ತನಗೇ ಅರಿವಿಲ್ಲದೆ ತನ್ನ ಅಹಂಭಾವವನ್ನು ದಪ್ಪ ಚರ್ಮವನ್ನೂ ಅವನು ತೋರಿಸಿಕೊಳ್ಳುತ್ತಾನೆ)

''ಮದುವೆ ಮಾಡಿಕೊಳ್ಳಲು ನನ್ನ ಕಾರಣಗಳಿವೆ. ಮೊದಲನೆಯದಾಗಿ (ನನ್ನ ಹಾಗೆ) ನೆಮ್ಮದಿ ಸ್ಥಿತಿಯಲ್ಲಿರುವ ಪ್ರತಿಯೊಬ್ಬ ಪಾದ್ರಿಯೂ ಮದುವೆಯಾಗಿ ಸುತ್ತಮುತ್ತಲಿನವರಿಗೆ ಮೇಲ್ಪಂಕ್ತಿಯಾಗುವುದು ಸರಿ ಎಂದು ನನ್ನ ಅಭಿಪ್ರಾಯ. ಎರಡನೆಯದಾಗಿ, ಇದು ನನ್ನ ಸುಖವನ್ನು ಬಹುಮಟ್ಟಿಗೆ ಹೆಚ್ಚಿಸುತ್ತದೆ ಎಂದು ನನ್ನ ದೃಢ ಭಾವನೆ. ಮೂರನೆಯದಾಗಿ - ಇದನ್ನು ನಾನು ಕೂಡಲೇ ಹೇಳಬೇಕಾಗಿತ್ತು - ನನ್ನ

ಪೋಷಕಿ ಎಂದು ನಾನು ಹೆಸರಿಸಬಹುದಾದ ಗೌರವ ನನಗಿರುವ ಶ್ರೀಮಂತರು ಎರಡು ಬಾರಿ ನನಗೆ ಎರಡು ಬಾರಿ ಕೃಪೆ ಇಟ್ಟು ಹೀಗೆ ಮಾರ್ಗದರ್ಶನ ಮಾಡಿದ್ದಾರೆ. ನಾನು ಹನ್ಸ್‌ಫರ್ಡ್‌ನ್ನು ಬಿಡುವ ಹಿಂದಿನ ಶನಿವಾರ ರಾತ್ರಿ, ಸೇವಕಿ ಶ್ರೀಮಂತರ ಮಗಳ ಪಾದ ಪೀಠವನ್ನು ಸರಿ ಮಾಡುತ್ತಿದ್ದಾಗ, ಆಕೆ ಮಿ. ಕಾಲಿನ್ಸ್ ನೀವು ಮದುವೆಯಾಗಲೇಬೇಕು ನಿಮ್ಮಂಥ ಪಾದ್ರಿ ಮದುವೆಯಾಗಲೇಬೇಕು ಸರಿಯಾದ ಆಯ್ಕೆ ಮಾಡಿಕೊಳ್ಳಿ, ನನಗಾಗಿ ಸಂಸ್ಕೃತಳಾದ ಹುಡುಗಿಯನ್ನು ಆರಿಸಿ, ನಿಮಗೋಸ್ಕರವಾಗಿಯೂ ಅಂಥವಳನ್ನು ಆರಿಸಿ. ಅವಳು ಚಟುವಟಿಕೆಯ ಹುಡುಗಿಯಾಗಿರಲಿ, ದೊಡ್ಡಸ್ತಿಕೆಯಲ್ಲಿ ಬೆಳೆದ ಹುಡುಗಿ ಬೇಡ, ಅವಳಿಂದ ಉಪಯೋಗವಾಗುವಂತಿರಬೇಕು, ಸ್ವಲ್ಪ ಆದಾಯದಲ್ಲಿ ಬಹು ಖರ್ಚು ವೆಚ್ಚಗಳನ್ನು ನಿರ್ವಹಿಸುವಂಥವಳಾಗಬೇಕು. ಇದು ನನ್ನ ಬುದ್ಧಿವಾದ. ಆದಷ್ಟು ಬೇಗ ಅಂಥ ಹುಡುಗಿಯನ್ನು ಹುಡುಕಿ ಹನ್ಸ್‌ಫರ್ಡ್ ಕರೆದುಕೊಂಡು ಬನ್ನಿ, ನಾನು ನಿಮ್ಮ ಮನೆಗೆ ಭೇಟಿ ಕೊಡುತ್ತೇನೆ' ಎಂದು ಹೇಳಿದರೂ ಸುಂದರಿಯಾದ ನನ್ನ ಕಸಿನ್, ಈ ಮಾತನ್ನು ನಾನು ಹೇಳಲು ಅನುಮತಿ ಕೊಡು. ನಾನು ನಿನಗೆ ಕೊಡಬಹುದಾದ ಅನುಕೂಲಗಳಲ್ಲಿ ಲೇಡಿ ಕಾಥರೀನ್ ಡಿ ಬೋರ್ ಅವರ ಕಣ್ಣಿಗೆ ಬೀಳುವುದು ಮತ್ತು ಅವರ ಕೃಪೆಯನ್ನು ಸವಿಯುವುದು ತೀರ ಲೆಕ್ಕಕ್ಕೆ ಬಾರದ ಅನುಕೂಲವೇನು ಅಲ್ಲ ಎಂದು ನನ್ನ ಅನಿಸಿಕೆ. ಆಕೆಯು ನಡೆದುಕೊಳ್ಳುವ ರೀತಿಯನ್ನು ನಾನು ವರ್ಣಿಸಲು ಸಾಧ್ಯವೇ ಇಲ್ಲ ಎಂದು ನಿನಗೇ ಗೊತ್ತಾಗುತ್ತದೆ. ನಿನ್ನ ಮಾತಿನ ಚಾತುರ್ಯ ಮತ್ತು ಲವಲವಿಕೆಗಳು, ಆಕೆಯ ಉನ್ನತ ಸ್ಥಾನವು (ಮಾತನಾಡುವವರಿಗೆ) ತಂದುಕೊಡುವ ಮೌನ ಮತ್ತು ಗೌರವಗಳೊಡನೆ ಸೇರಿದಾಗಲಂತೂ ಆಕೆಗೆ ಒಪ್ಪಿಗೆಯಾಗುತ್ತವೆ ಎಂದು ನನಗೆ ತೋರುತ್ತದೆ. ವಿವಾಹದ ಪರವಾಗಿ ನನ್ನ ಸಾಮಾನ್ಯ ಉದ್ದೇಶದ ಬಗ್ಗೆ ಇಷ್ಟು ಹೇಳಿಯಾಯಿತು. ನಾನು ಲಾಂಗ್ ಬಾರ್ನ್‌ನ ಕಡೆಗೆ ಏಕೆ ಗಮನ ಹರಿಸಿದೆ ಎಂದು ಹೇಳಬೇಕು. ನಮ್ಮ ನೆರೆ ಹೊರೆಯಲ್ಲಿಯೇ ಸ್ನೇಹಪರವಾದ ಅನೇಕ ಮಂದಿ ಯುವತಿಯರಿದ್ದರೂ ನಾನು ಇಲ್ಲಿಗೇಕೆ ಬಂದೆ? ನಿನ್ನ ಗೌರವಾನ್ವಿತ ತಂದೆಯವರು ತೀರಿಕೊಂಡಾಗ (ಅವರು ಇನ್ನೂ ಬಹು ವರ್ಷ ಬಾಳಲಿ!) ಈ ಆಸಕ್ತಿ ನನಗೆ ಬರುವುದರಿಂದ, ಆ ದುಃಖದ ಘಟನೆ ಆದಾಗ (ನಾನು ಆಗಲೇ ಹೇಳಿದಂತೆ ಅದು ಇನ್ನೂ ಅನೇಕ ವರ್ಷಗಳ ಕಾಲ ಆಗದಿರಬಹುದು) ನಿಮಗೆ ನಷ್ಟ ಆದಷ್ಟು ಕಡಿಮೆಯಾಗಲಿ ಎನ್ನುವ ಕಾರಣಕ್ಕಾಗಿ ಅವರ ಹೆಣ್ಣು ಮಕ್ಕಳಲ್ಲಿ ಒಬ್ಬರನ್ನು ನನ್ನ ಹೆಂಡತಿಯಾಗಿ ಆಯ್ಕೆ ಮಾಡಿಕೊಳ್ಳದಿದ್ದರೆ ನನಗೆ ಮನಸ್ಸು ಸಮಾಧಾನವಿರುವುದಿಲ್ಲ. ನನ್ನ ಸುಂದರ ಕಸಿನ್, ಇದೇ ನನ್ನ ಉದ್ದೇಶ: ಇದರಿಂದ ನನ್ನಲ್ಲಿ ನಿನಗೆ ಗೌರವ ಕಡಿಮೆಯಾಗುವುದಿಲ್ಲ ಎಂದುಕೊಂಡು ಹೆಮ್ಮೆ ಪಡುತ್ತೇನೆ. ಇನ್ನು ಉಳಿದಿರುವುದು ಒಂದೇ ಕೆಲಸ, ಅತ್ಯಂತ ಚೈತನ್ಯಶಾಲಿ ಭಾಷೆಯಲ್ಲಿ ನನ್ನ ಪ್ರೀತಿಯ ಉತ್ಕಟತೆಯನ್ನು ಹೇಳುವುದು. ಆಸ್ತಿಯ ವಿಷಯದಲ್ಲಿ ನನಗೆ ಎಳ್ಳಷ್ಟೂ ಆಸಕ್ತಿ ಇಲ್ಲ. ನಿನ್ನ ಪಾಲು ಎಂದರೆ

ಶೇ. 4ರ ಬಡ್ಡಿ ಬರುವ ಒಂದು ಸಾವಿರ ಪೌಂಡ್‌ಗಳು, ಅದೂ ನಿನಗೆ ಬರುವುದು ನಿಮ್ಮ ತಾಯಿ ತೀರಿಕೊಂಡ ಮೇಲೆ ಎಂದು ನನಗೆ ಗೊತ್ತಿದೆ; ಆದುದರಿಂದ ನಾನು ನಿಮ್ಮ ತಂದೆ ಹಣವನ್ನು ಕೊಡಬೇಕೆಂದೇನು ಕೇಳುವುದಿಲ್ಲ. ಈ ವಿಷಯದಲ್ಲಿ ನಾನು ಎಂದೂ ಮೌನವಾಗಿರುತ್ತೇನೆ; ನಮ್ಮ ಮದುವೆಯಾದ ನಂತರ ಎಂದೂ ಒಂದೇ ಒಂದು ಆಕ್ಷೇಪಣೆಯ ಮಾತೂ ನನ್ನ ತುಟಿಯನ್ನು ದಾಟಿ ಬರುವುದಿಲ್ಲ ಎಂದು ನೀನು ಖಂಡಿತವಾಗಿರಬಹುದು.''

ಅವನ ಮಾತನ್ನು ಈಗ ತಡೆಯಲೇ ಬೇಕಾಯಿತು.

''ನೀವು ಬಹಳ ಆತುರಪಡುತ್ತಿದ್ದೀರಿ'' ಅವಳು ಹೇಳಿದಳು. ''ನಾನು ಇನ್ನೂ ಉತ್ತರ ಕೊಟ್ಟಿಲ್ಲ ಎನ್ನುವುದನ್ನು ಮರೆಯುತ್ತಿದ್ದೀರಿ. ಇನ್ನು ತಡವಿಲ್ಲದೆ ಅದನ್ನು ಮಾಡುತ್ತೇನೆ. ನೀವು ನನ್ನನ್ನು ಹೊಗಳಿದ್ದೀರಿ, ನನ್ನ 'ಥ್ಯಾಂಕ್ಸ್' ಸ್ವೀಕರಿಸಿ. ನಾನು ನಿಮ್ಮನ್ನು ಮದುವೆಯಾಗಬೇಕೆಂದು ಕೇಳಿ ಗೌರವಿಸಿದ್ದೀರಿ ಎಂದು ನನಗೆ ಚೆನ್ನಾಗಿ ಗೊತ್ತು, ಆದರೆ ನಾನು ಅದನ್ನು ನಿರಾಕರಿಸದೆ ಬೇರೆ ದಾರಿಯೇ ಇಲ್ಲ.''

ಕೈಯಾಡಿಸುತ್ತ ಕಾಲಿನ್ಸ್ ಹೇಳಿದ. ''ತಾವು ಒಪ್ಪಿಕೊಳ್ಳಲು ಒಳಗೊಳಗೇ ತೀರ್ಮಾನಿಸಿರುವ ಮನುಷ್ಯನು ಮೊದಲ ಬಾರಿ ಅವರ ಕೃಪೆಯನ್ನು ಬೇಡಿದಾಗ ಯುವತಿಯರು ಅವನ ಪ್ರಾರ್ಥನೆಗಳನ್ನು ನಿರಾಕರಿಸುವುದು ಸಾಮಾನ್ಯವಾದ ಸಂಗತಿ ಎಂದು ನನಗೆ ತಿಳಿಯದೆ ಇಲ್ಲ; ಕೆಲವೊಮ್ಮೆ ಎರಡು ಬಾರಿ ಮೂರು ಬಾರಿ ನಿರಾಕರಿಸುವುದೂ ಉಂಟು ಎಂದೂ ತಿಳಿದಿದೆ. ಆದುದರಿಂದ ನೀನು ಈಗ ಆಡಿದ ಮಾತುಗಳಿಂದ ನನಗೇನೂ ನಿರುತ್ಸಾಹವಾಗಿಲ್ಲ; ಸ್ವಲ್ಪ ಕಾಲದಲ್ಲಿಯೇ ಚರ್ಚಿನಲ್ಲಿ ನಿನ್ನ ಕೈಹಿಡಿಯುವ ಭರವಸೆ ಇದೆ.''

''ನಿಜವಾಗಿಯೂ'' ಎಲಿಸಬೆತ್ ಎಂದಳು. ''ನನ್ನ ಸ್ಪಷ್ಟವಾದ ಮಾತಿನ ನಂತರ ನಿಮ್ಮ ಭರವಸೆ ವಿಚಿತ್ರವಾದದ್ದು. ಮತ್ತೆ ಕೇಳಬಹುದೆಂಬ ಸಾಧ್ಯತೆಯನ್ನು ನೆಚ್ಚಿಕೊಂಡು ತಮ್ಮ ಸುಖಕ್ಕೆ ಸಂಚಕಾರವನ್ನು ತಂದುಕೊಳ್ಳುವ ಯುವತಿಯರು ಇರುವುದೇ ಆದರೆ ನಾನು ಅವರಲ್ಲಿ ಒಬ್ಬಳಲ್ಲ ಎಂದು ನಿಮಗೆ ಖಂಡಿತವಾಗಿ ಹೇಳುತ್ತೇನೆ. ಒಪ್ಪುವುದಿಲ್ಲ ಎಂದು 'ಸೀರಿಯಸ್' ಆಗಿ ಹೇಳುತ್ತಿದ್ದೇನೆ. ನೀವು ನನ್ನನ್ನು ಸುಖಪಡಿಸಲಾರಿರಿ; ನನ್ನಿಂದ ನಿಮಗೆ ಸುಖವಿರುವುದಿಲ್ಲ ಎಂದು ನನ್ನ ದೃಢ ನಂಬಿಕೆ. ನಿಮ್ಮ ಸ್ನೇಹಿತರು ಲೇಡಿ ಕಾಥರೀನ್‌ಗೆ ನನ್ನ ಪರಿಚಯವಾದರೆ ಈ ಸ್ಥಾನಕ್ಕೆ ನಾನು ಎಲ್ಲ ರೀತಿಗಳಲ್ಲಿಯೂ ಅನರ್ಹಳೆಂದು ಅವರಿಗೆ ಅನ್ನಿಸುತ್ತಿತ್ತು ಎಂದು ನನಗೆ ತೋರುತ್ತದೆ''

''ಲೇಡಿ ಕಾಥರೀನ್ ಅವರಿಗೆ ಹಾಗೆನ್ನಿಸುತ್ತಿತ್ತು ಎನ್ನುವುದು ಖಂಡಿತವಾದರೆ'' ಮಿ. ಕಾಲಿನ್ಸ್ ಬಹಳ ಗಂಭೀರವಾಗಿ ಹೇಳಿದ. ''.... ಆದರೆ ಆ ಶ್ರೀಮಂತರು ಒಪ್ಪುತ್ತಿರಲಿಲ್ಲ ಎಂದು ನಾನು ಭಾವಿಸಲಾರೆ ಅವರನ್ನು ಮತ್ತೆ ಕಾಣುವ ಗೌರವ ನನಗೆ ಲಭ್ಯವಾದಾಗ

ನಾನು ಅವರಿಗೆ ನಿಮ್ಮ ವಿನಯ, ಮಿತವ್ಯಯ ಮತ್ತು ಇತರ ಆಕರ್ಷಕ ಅರ್ಹತೆಗಳನ್ನು ಸಾಧ್ಯವಿರುವಷ್ಟು ಹೊಗಳುತ್ತೇನೆ ಎಂದು ನೀವು ನೆಚ್ಚಬಹುದು''


''ಮಿ. ಕಾಲಿನ್ಸ್ ನನ್ನನ್ನು ಹೊಗಳುವ ಅಗತ್ಯವೇ ಇರುವುದಿಲ್ಲ. ನಾನೇ ತೀರ್ಮಾನಿಸಲು ನೀವು ಅವಕಾಶ ಕೊಡಬೇಕು, ನಾನು ಹೇಳುವುದನ್ನು ನಂಬಿ ಗೌರವಿಸಬೇಕು. ನೀವು ಬಹಳ ಸುಖವಾಗಿರಿ, ಬಹಳ ಶ್ರೀಮಂತರಾಗಿರಿ ಎಂದು ಹಾರೈಸುತ್ತೇನೆ; ನಿಮ್ಮ ಕೈ ಹಿಡಿಯಲು ಒಪ್ಪದೆ, ನೀವು ಸುಖವಾಗಿ, ಶ್ರೀಮಂತರಾಗಿರಲು ಸಹಾಯ ಮಾಡುತ್ತಿದ್ದೇನೆ. ನನ್ನನ್ನು ಮದುವೆಯಾಗಲು ಅಪೇಕ್ಷಿಸಿದ್ದರಿಂದ ನನ್ನ ಕುಟುಂಬದ ವಿಷಯದಲ್ಲಿ ನಿಮ್ಮ ಸಂಸ್ಕೃತಿಗೆ ಸಮಾಧಾನವಾಗಿದೆ; ಲಾಂಗ್‌ಬಾರ್ನ್ ಖಾಲಿಯಾದಾಗ ನಿಮ್ಮ ವಿಷಯಕ್ಕೆ ಬೇಸರ ಪಟ್ಟುಕೊಳ್ಳದೆ ಅದನ್ನು ತೆಗೆದುಕೊಳ್ಳಬಹುದು ಆದ್ದರಿಂದ ಈ ವಿಷಯವು ಇಲ್ಲಿಗೆ ಮುಗಿಯಿತು ಎಂದುಕೊಳ್ಳಬಹುದು.'' ಹೀಗೆ ಎಲಿಸಬೆತ್ ಹೊರ ಹೊರಡಲು ಎದ್ದಳು ಅವನು ಅವಳನ್ನು ತಡೆದು ಹೇಳಿದ: ''ಮತ್ತೆ ಈ ವಿಷಯವನ್ನು ನಿನ್ನೊಡನೆ ಪ್ರಸ್ತಾಪಿಸಿ ನನ್ನನ್ನು ನಾನು ಗೌರವಿಸಿಕೊಂಡಾಗ ನೀನು ಇನ್ನೂ ಅನುಕೂಲವಾದ ಉತ್ತರವನ್ನು ಕೊಡುತ್ತಿ ಎಂದು ನನಗೆ ಭರವಸೆ ಇದೆ. ಈಗ ನೀನು ಕ್ರೌರ್ಯದಿಂದ ನಡೆದುಕೊಂಡಿದ್ದೀ ಎಂದು ನಾನು ಸ್ವಲ್ಪವೂ ನಿನ್ನ ವಿಷಯ ಆಕ್ಷೇಪಿಸುವುದಿಲ್ಲ; ಏಕೆಂದರೆ ಗಂಡನು ಮೊದಲ ಬಾರಿ ಪ್ರಾರ್ಥಿಸಿದಾಗ ಒಪ್ಪದಿರುವುದು ಬಹು ಕಾಲದಿಂದ ಸ್ತ್ರೀಯರ ಪದ್ಧತಿ ಎಂದು ನನಗೆ ಗೊತ್ತು. ಸ್ತ್ರೀ ಸ್ವಭಾವದ ಸಹಜ ಭಾವ ಸೂಕ್ಷ್ಮತೆಯನ್ನು ಮೀರದೆ ನನ್ನನ್ನು ಪ್ರೋತ್ಸಾಹಿಸಲು ಏನು ಹೇಳಬಹುದೋ ಅದನ್ನು ಈಗನೂ ನೀನು ಪ್ರಾಯಶಃ ಹೇಳಿದ್ದೀಯೆ.''

ಸ್ವಲ್ಪ ಕಠಿಣವಾಗಿಯೇ ಎಲಿಸಬೆತ್ ಹೇಳಿದಳು: ''ನಿಜವಾಗಿ ಮಿ. ಕಾಲಿನ್ಸ್, ನಿಮ್ಮ ರೀತಿ ನನಗೆ ಒಗಟಾಗಿದೆ. ನಾನು ಈವರೆಗೆ ಹೇಳಿದ್ದೆಲ್ಲ ನಿಮಗೆ ಪ್ರೋತ್ಸಾಹ ಎನ್ನಿಸಿದ್ದರೆ, ನಿಜವಾಗಿ ನಾನು ಒಪ್ಪುತ್ತಿಲ್ಲ ಎಂದು ನಿಮಗೆ ಸ್ಪಷ್ಟಮಾಡಲು ಹೇಗೆ ಹೇಳಬೇಕೆಂದೇ ನನಗೆ ಅರ್ಥವಾಗುತ್ತಿಲ್ಲ.''

''ನನ್ನ ಪ್ರೀತಿಯ ಮಾತುಗಳನ್ನು ನೀನು ತಿರಸ್ಕರಿಸುತ್ತಿರುವುದು ಬರಿಯ ಬಾಯಿ ಮಾತಿನಲ್ಲಿ ಎಂದು ನಾನು ಹೆಮ್ಮೆ ಪಟ್ಟುಕೊಳ್ಳಲು ನೀನು ಅನುಮತಿ ಕೊಡಬೇಕು, ನನ್ನ ಪ್ರೀತಿಯ ಕಸಿನ್. ಹಾಗೆ ನಾನು ನಂಬಲು ಕಾರಣಗಳಿವೆ. ನನ್ನ ಕೈ ನೀನು ಹಿಡಿಯಲು ಅಯೋಗ್ಯನಾದದ್ದು ಎಂದಾಗಲಿ ನಾನು ನಿನಗೆ ಕೊಡಲಿಲ್ಲ ಸಂಸಾರದ ಸೌಲಭ್ಯ ಬಯಸಲು ಸಾಧ್ಯವೇ ಇಲ್ಲದಂತಹದು ಎಂದೇನೂ ನನಗೆ ಎನ್ನಿಸುವುದಿಲ್ಲ. ಬದುಕಿನಲ್ಲಿ ನನ್ನ ಸ್ಥಾನ, ಬರೋ ಕುಟುಂಬದೊಂದಿಗೆ ನನ್ನ ಸಂಬಂಧ, ನಿನ್ನ ಕುಟುಂಬದೊಂದಿಗೆ ನನ್ನ ಸಂಬಂಧ ಇವೆಲ್ಲ ಬಹುಮಟ್ಟಿಗೆ ನನ್ನ ಪರವಾಗಿವೆ; ನೀನು ಇದನ್ನೂ ಗಮನಿಸಬೇಕು,

ನಿನಗೆ ಹಲವಾರು ಆಕರ್ಷಣೆಗಳಿದ್ದರೂ ಬೇರೆ ಯಾರಾದರೂ ನಿನ್ನನ್ನು ಮದುವೆಯಾಗಲು ಮುಂದೆ ಬರುತ್ತಾರೆ ಎನ್ನುವುದೇನು ಖಂಡಿತವಲ್ಲ. ದುರದೃಷ್ಟವಶಾತ್, ಆಸ್ತಿಯಲ್ಲಿ ನಿನಗಿರುವುದು ಬಹು ಸಣ್ಣ ಪಾಲು, ಆದರಿಂದ ನಿನ್ನ ಚೆಲುವು ಮತ್ತಿತರ ಆಕರ್ಷಕ ಅರ್ಹತೆಗಳೆಲ್ಲ ಲೆಕ್ಕಕ್ಕೆ ಬಾರದೆ ಹೋಗುವುದೇ ಬಹುಮಟ್ಟಿಗೆ ಸಾಧ್ಯ. ಆದುದರಿಂದ, ನೀನು ನನ್ನನ್ನೇ ಒಪ್ಪುವುದಿಲ್ಲ ಎಂದು 'ಸೀರಿಯಸ್' ಆಗಿ ಹೇಳುತ್ತಿಲ್ಲ ಎಂದೇ ಭಾವಿಸುತ್ತೇನೆ ನೀನು ನನ್ನನ್ನು ಒಪ್ಪುವುದಿಲ್ಲ ಎಂದು ಹೇಳುತ್ತಿರುವುದು ಸುಸಂಸ್ಕೃತ ಮಹಿಳೆಯರ ಎಂದಿನ ಪದ್ಧತಿಯಂತೆ ಎಂದುಕೊಂಡಿದ್ದೇನೆ.''

''ನಿಮಗೆ ಖಂಡಿತವಾಗಿ ಹೇಳುತ್ತೇನೆ, ಒಬ್ಬ ಗೌರವಾನ್ವಿತ ವ್ಯಕ್ತಿಯನ್ನು ಗೋಳುಹೊಯ್ಯುವ ಸಂಸ್ಕೃತಿ ನನಗೆ ಬೇಕಿಲ್ಲ. ನೀವು ನನ್ನ ಮಾತನ್ನು ನಂಬಿದರೆ ಅದೇ ನನ್ನನ್ನು ಗೌರವಿಸಿದಂತೆ. ನನ್ನನ್ನು ಮದುವೆಯಾಗಲು ಬಯಸಿ ನೀನು ನನ್ನನ್ನು ಗೌರವಿಸಿದ್ದೀರಿ ಅದಕ್ಕಾಗಿ ಮತ್ತೆ ಮತ್ತೆ ಧನ್ಯವಾದಗಳು. ಆದರೆ ಒಪ್ಪಿಕೊಳ್ಳುವುದು ಸಾಧ್ಯವೇ ಇಲ್ಲ. ನನ್ನ ಭಾವನೆಗಳೆಲ್ಲ ಅದಕ್ಕೆ ವಿರುದ್ಧವಾಗಿವೆ. ಇನ್ನೂ ಸ್ಪಷ್ಟವಾಗಿ ಹೇಳುವುದು ಸಾಧ್ಯವೇ? ನಿಮ್ಮನ್ನು ಗೋಳುಹೊಯ್ಯುವ ಸುಸಂಸ್ಕೃತ ಮಹಿಳೆ ಎಂದು ನನ್ನನ್ನು ಕಾಣಬೇಡಿ, ತನ್ನ ಹೃದಯದಿಂದ ಸತ್ಯವನ್ನು ಆಡುತ್ತಿರುವ ವಿವೇಚನೆ ಇರುವವಳು ಎಂದು ಭಾವಿಸಿ.''



ಕೊಲೆ! ಕೊಲೆ! ಎಲ್ಲೆಲ್ಲೂ ಕೊಲೆ!

(Murder, Murder Everywhere - only a few are detected)

- ಶಾ.ರಾ.

ಕ್ರೈಂ ಡೈರಿ, ಕ್ರೈಮ್ ಸ್ಟೋರಿ ಮುಂತಾದ ಸೀರಿಯಲ್‌ಗಳನ್ನು ನೋಡಿ ನೋಡಿ ನನ್ನ ತಲೆ ಪೂರ್ತಿ ಕೆಟ್ಟಿದೆ ಎಂಬುದು ಅಕ್ಕಪಕ್ಕದ ಮನೆಯವರ ಅಭಿಪ್ರಾಯ. ಇದನ್ನು ಕೇಳಿ ನನಗೇನೂ ಆಶ್ಚರ್ಯವಾಗಲಿಲ್ಲ. ಅಂಥವರು ಎಷ್ಟುಮಾತ್ರವೂ ಗಾಬರಿ ಪಡಬೇಕಾಗಿಲ್ಲ. ಅವರ ಬಗ್ಗೆ ನನಗೆ ಸಂಪೂರ್ಣ ಸಹಾನುಭೂತಿ ಇರುವುದಲ್ಲದೆ ಅವರಿಗೆ ಎಂದಾದರೂ ಒಂದಲ್ಲ ಒಂದಿನ ಸಹಾಯ ಮಾಡಬಲ್ಲೆ ಎಂಬ ವಿಶ್ವಾಸ ನನಗಿದೆ. ನಿಜ ಹೇಳಬೇಕು ಎಂದರೆ ಈ ಸೀರಿಯಲ್‌ಗಳನ್ನು ನೋಡಿದ ಮೇಲೆ 'ಮರ್ಡರ್' ಎಂಬುದು ನನಗೆ ರಕ್ತಗತವಾಗಿಬಿಟ್ಟಿದೆ. ರಕ್ತದ ಈ ಗುಣದಿಂದಲೋ ಏನೋ ನಾನು ಈಗ ಪತ್ತೇದಾರಿ ಕಾದಂಬರಿಗಳನ್ನು ಓದುವ ಚಟಕ್ಕೆ ಬಲಿಯಾಗಿದ್ದೇನೆ. ಇಂಥ ಚಾಳಿಗಳು ಮನಸ್ಸಿನ ಮೇಲೆ ಕೆಟ್ಟ ಪರಿಣಾಮ ಬೀರುತ್ತೆ, ಈ ಅಭ್ಯಾಸಗಳನ್ನು ಬಿಟ್ಟುಬಿಡಿ ಅಂತ 'ಬೆಟರಾಫ್' ಅಂತ ಅನ್ನಿಸಿಕೊಂಡವಳು ಒಂದು ದಿನ ಉಪದೇಶ ಮಾಡಿದಳು ನನಗೆ 'ರತ್ನಗಿರಿ ರಹಸ್ಯ'ವನ್ನು ನೋಡುತ್ತ ಬ್ರೇಕ್ ಮಧ್ಯೆ! ಮಗನಿಗೆ ಭಾನಾಮತಿ ಹುಚ್ಚು ಹಿಡಿದಿದೆ CET ನೆಗೆದುಬಿದ್ದ ಮೇಲೆ!

ನನ್ನದು 'ಕ್ರಿಮಿನಲ್ ಮೆಂಟಾಲಿಟಿ', 'ಕ್ರಿಮಿನಲ್ ಪ್ರೊಪೆನ್ಸಿಟಿ' ಅಂತ ಏನೇನೋ ಊಹಿಸಿಕೊಂಡು 'ಟೆಯಿಂಟೆಡ್ ಮಿನಿಸ್ಟರ್' ಪಟ್ಟಕ್ಕೆ ನನ್ನನ್ನು ಏರಿಸಿ ಕುರ್ಚಿ ಮೇಲೆ ಕೂರಿಸಿಬಿಡಬೇಡಿ. ಅಷ್ಟು ತಾಕತ್ ಇದ್ದಿದ್ದರೆ ಹಾಸ್ಯ ಪತ್ರಿಕೆಯ ಸಂಪಾದಕನ ಗೆಳೆತನ ಏಕೆ ಮಾಡುತ್ತಿದ್ದೆ!

ಇತ್ತೀಚೆಗೆ ನನ್ನ ದಾರಿಯೇ ನನಗೆ ಪತ್ತೆಯಾಗುತ್ತಿಲ್ಲ. ನನ್ನ ವಿಚಿತ್ರ ಮನೋಪ್ರವೃತ್ತಿಯಂತೂ ಪತ್ತೆದಾರಿಯ ಕಡೆಗೆ ನನ್ನನ್ನು ಎಳೆಯುತ್ತಿದೆ. ಮೊನ್ನೆ ಬಾಲ್ಕನಿಯ ಕಿಟಕಿ ಹತ್ತಿರ ಒಂದು ಕೆಂಪು ಬಣ್ಣದ ಹಿಡಿ ಇದ್ದ ಉದ್ದನೆಯ ಚಾಕು ಬಿದ್ದಿತ್ತು. ಅದರ ಅಲಗನ್ನು ನೋಡುತ್ತ ಅಲ್ಲಾಡದೆ ನಿಂತೆ ಮಲ್ಲಾಡದ ಗಿಳಿಯಂತೆ! 'ಈರುಳ್ಳಿಯನ್ನು ಕತ್ತರಿಸಿ ಅಡಿಗೆಯವನು ಚಾಕೂನ ಅಲ್ಲೇ ಬಿಸಾಡಿ ಹೋಗಿರಬೇಕು' ಅಂತ ಮನೆಗೆಲಸದವಳು ಹೇಳಿದ್ದನ್ನು ನಾನು ಅಷ್ಟು ಸುಲಭವಾಗಿ ಒಪ್ಪಿಕೊಳ್ಳಲು ತಯಾರಿರಲಿಲ್ಲ. ಚಾಕುವನ್ನು ಕೈಗೆತ್ತಿಕೊಂಡು ಅಲಗಿನ ಮೇಲೆ ರಕ್ತದ ಕಲೆಗಳು ಹೆಪ್ಪುಗಟ್ಟಿಕೊಂಡಿದೆಯೆ ಎಂಬುದನ್ನು ಪರೀಕ್ಷಿಸೋಣವೆಂದರೆ ಅದರ ಮೇಲಿರುವ ಕೊಲೆಗಾರನ ಬೆರಳಚ್ಚು ಹೋಗಿಬಿಟ್ಟರೆ?

ಈಗಂತೂ ಎಲ್ಲಿ ಏನೇ ಶಬ್ದವಾದರೂ ಬಾಂಬ್ ಸ್ಫೋಟವೇ ಇರಬೇಕೆಂದು ನನ್ನ ಬುದ್ಧಿಗೆ ತಿಳಿಯುತ್ತದೆ. ಬಾಂಬ್ ಸಿಡಿಸಿ ಕೊಲೆಗಾರ ಪಕ್ಕದ ಗಲ್ಲಿಯಲ್ಲಿ ಓಡುತ್ತಿರುವಂತೆ - ಪೊಲೀಸಿನವರು ಅವನನ್ನು ಹಿಂದಿನಿಂದ ಅಟ್ಟಿಸಿಕೊಂಡು ಹೋಗುತ್ತಿರುವಂತೆ, ಕ್ರೈಮ್

ಎಪಿಸೋಡುಗಳಲ್ಲಿ ಪದೇ ಪದೇ ತೋರಿಸುವಂಥ ಚಿತ್ರಗಳು ನನ್ನ ಮನಸ್ಸಿನೊಳಗೆ ಮೂಡಿದಂತಾಗಿ ನಾನೂ ಕೊಲೆಗಾರನ ಹಿಂದೆ ಓಡುವಂತಾಗುತ್ತದೆ. ಹೇಗಾದರು ಆಗಲಿ ಎಂದು ನಾನು ಕೈಗಡಿಯಾರವನ್ನು ನೋಡಿ ತಕ್ಷಣ ಟೈಮ್ ಗುರ್ತು ಹಾಕಿಕೊಂಡುಬಿಡುತ್ತೇನೆ. ಯಾಕೆಂದರೆ ಕೊಲೆ ಯಾವುದೇ ಆಗಲೀ, ಎಲ್ಲೇ ನಡೆಯಲಿ ಟೈಮ್ ತುಂಬ ಮುಖ್ಯ ತಾನೇ! ಕೊಲೆಯ ಕಾಲವನ್ನು ನಿರ್ಣಯಿಸುವ ಹಂತದಲ್ಲಿ ಬಾಂಬ್ ಸಿಡಿದಾಗ ಟೈಮ್ ಎಷ್ಟಾಗಿತ್ತು ಎಂಬುದರ ಬಗ್ಗೆ ಕರಾರುವಕ್ಕಾಗಿ ಕೋರ್ಟಿನಲ್ಲಿ ಸಾಕ್ಷ್ಯ ಕೊಡುವುದಕ್ಕೆ ನಾನು ಸಿದ್ಧ! ನೀವು ಯಾವುದೇ ಪತ್ತೆದಾರಿ ಕಾದಂಬರಿಯನ್ನು ಓದಿ, ನಿಮಗೇ ಗೊತ್ತಾಗುತ್ತೆ - ಕೊಲೆಯಾಗಬೇಕಾದ ಟೈಮನ್ನು ನಿರ್ಧರಿಸುವವನು ಕಥಾ ಲೇಖಕನೇ! ಸಾಮಾನ್ಯವಾಗಿ ಅವನೇ ಕೊಲೆಪಾತಕ!

ನನ್ನ ಪರಮ ಆಪ್ತ ಮಿತ್ರ ನಿವೃತ್ತ ನ್ಯಾಯಾಧೀಶ ಗುಂಡೇಶ್ ದಡದಳ್ಳಿ ಮೊನ್ನೆ ನನ್ನನ್ನು ಊಟಕ್ಕೆ ಕರೆದಿದ್ದ; ಅವನು ಸುಸೂತ್ರವಾಗಿ ರಿಟೈರ್ ದ ಸಂತಸವನ್ನು ಹಂಚಿಕೊಳ್ಳೋಕೆ. ಅವನದು ಒಂಟಿ ಜೀವನ. ಅಷ್ಟು ದೊಡ್ಡ ಬಂಗಲೆಯಲ್ಲಿ ಏಕಾಂಗಿಯಾಗಿ ಒಬ್ಬನೇ ವಾಸವಾಗಿದ್ದಾನೆ. ಇಷ್ಟು ಸಾಲದೆ? ನನ್ನ ತಲೆಯನ್ನು ತಿನ್ನುವುದಕ್ಕೆ. ಕಾಲಿಂಗ್ ಬೆಲ್‌ನ್ನು ಒತ್ತುವುದಕ್ಕೆ ಮುಂದೆ ಒಮ್ಮೆ ಗಂಟೆ ನೋಡಿಕೊಂಡೆ. ರಾತ್ರಿ 8.45 ಬೀದಿ ತುದಿಯಲ್ಲಿದ್ದ ಗೋಪುರದ ಗಡಿಯಾರ 7.45 ತೋರಿಸುತ್ತಿತ್ತು. ನನ್ನ ಗಡಿಯಾರ ಒಂದು ಗಂಟೆ ಫಾಸ್ಟ್ ಅಂತ ನೀವು ಹೇಳಬಹುದು ಆದರೆ ಗೋಪುರದ ಗಡಿಯಾರ ಸರ್ಕಾರಿ ಗಡಿಯಾರವಾದ್ದರಿಂದ ಒಂದು ಗಂಟೆ ಸ್ಲೋ ಎಂಬುದನ್ನು ನೀವು ಮರೆಯಬಾರದು! ಅಂದ ಮೇಲೆ ಸರಾಸರಿ ತೆಗೆದುಕೊಂಡರೆ ಸರಿಯಾದ ಟೈಮನ್ನು ನಿರ್ಣಾಯಕವಾಗಿ ಹೇಳಬಹುದಲ್ಲ, 'ಪರ್ಫೆಕ್ಟ್ ಎವಿಡೆನ್ಸ್' ಎಂದರೆ ಇದು! ಇದರ ಅವಶ್ಯಕತೆಯಾದರೂ ಎಲ್ಲಿತ್ತು ಅಂತೀರ. ಸ್ವಲ್ಪ ತಾಳಿ. ನಿಮಗೇ ಮುಂದೆ ಗೊತ್ತಾಗುತ್ತೆ. ಮತ್ತೆ ಕಾಲಿಂಗ್ ಬೆಲ್ ಒತ್ತಿದೆ - ಒಂದು ಸಲ - ಎರಡು ಸಲ - ಮೂರು ಸಲ - ಒಳಗಿಂದ ಧ್ವನಿ ಬರಲಿಲ್ಲ. ನನ್ನ ತಲೆ ಸುಮ್ಮನಿರುತ್ತದೆಯೆ? ಓಡುವುದಕ್ಕೆ ಪ್ರಾರಂಭಿಸಿತು: ಗುಂಡೇಶ್ ಬಾಗಿಲ ಮುಂಭಾಗದಲ್ಲೇ ಅಂಗಾತ ಕಾಲು ಚಾಚಿಕೊಂಡು ಬಿದ್ದಿರುತ್ತಾನೆ. ಉಸಿರಾಟ ನಿಂತುಹೋಗಿದ್ದರೆ ಕೈ ಕಾಲುಗಳಲ್ಲಿ ಕಾವು ಎಷ್ಟಿದೆ ಎಂಬುದನ್ನು ಪರೀಕ್ಷಿಸಬಹುದಲ್ಲ. ಬೆಚ್ಚಗಿರಲಿ ಆಪ್ತಮಿತ್ರ - ಎಂದೆಲ್ಲ ಅಂದುಕೊಂಡೆ ಕೊರಗುತ್ತ. ಮತ್ತೆ ಗಡಿಯಾರ ನೋಡಿ ಮೆತ್ತಗೆ ತಳ್ಳಿದೆ. ಬಾಗಿಲು ತೆಗೆದುಕೊಂಡಿತು. ಮುಂದಕ್ಕೆ ಸರಿಯಿತು. ಗಡಿಯಾರದ ಟಿಕ್ ಟಿಕ್ ಶಬ್ದ ಮಾತ್ರ ಮೌನವನ್ನು ಸೀಳಿಕೊಂಡು ಹೊರಕ್ಕೆ ಚಿಮ್ಮುತ್ತಿತ್ತು. ಅದು ಕಿವಿಯನ್ನು ಮುಟ್ಟುವ ಹೊತ್ತಿಗೆ ತಲೆಯಲ್ಲಿ 'ಟಿಕ್-20' ತುಂಬಿಕೊಂಡಿತ್ತು. ಪೋಲೀಸಿಗೆ ನಾನೇ ಸುದ್ದಿ ತಿಳಿಸಬೇಕಾಗಿ ಬರಬಹುದೇನೋ ಎಂದುಕೊಂಡು ಕಾಲಿಂಗ್ ಬೆಲ್ಲನ್ನು ಮತ್ತೊಮ್ಮೆ ಹೆಬ್ಬೆಟ್ಟಿನಿಂದ ಒತ್ತಿದೆ. ಅಡಿಗೆಯವನಿರಬೇಕು. ಕೈಲಿ ಒಂದು ಚಾಕು ಇಟ್ಟುಕೊಂಡು ವರಾಂಡಕ್ಕೆ ಧಾವಿಸಿ ಬಂದ. ದಂಡುವಾಳ್ಯದ ಗ್ಯಾಂಗಿನವನಿರಬಹುದೆಂಬ ಅನುಮಾನ ಬಂತು ನನಗೆ ಅವನು ಏನು ಹೇಳಿದನೋ, ಯಾವ ಭಾಷೆಯಲ್ಲಿ ಹೇಳಿದನೋ ನನಗೆ

ಅರ್ಥವಾಗಲಿಲ್ಲ. ಕುಳಿತಿಕೋ ಎನ್ನುವಂತೆ ಸನ್ನೆ ಮಾಡಿ ಕುರ್ಚಿ ತೋರಿಸಿದ. ಡ್ರಾಯಿಂಗ್ ರೂಮು ಬಿಕೋ ಎನ್ನುತ್ತಿತ್ತು. ಅಲ್ಲೇ ಹಾಸಿದ ರತ್ನಗಂಬಳಿಯ ಮೇಲೆ ಒಂದು ವಜ್ರದ ಹರಳಿನುಂಗುರ ಬಿದ್ದಿದ್ದು ಕಾಣಿಸಿತು. ಕೊಲೆಗಾರ ಅಲ್ಲಿದ್ದ ವಸ್ತುಗಳನ್ನು ಗಂಟು ಕಟ್ಟಿಕೊಂಡು ಹೋಗುವ ಆತುರದಲ್ಲಿ ಅದು ಕೆಳಕ್ಕೆ ಬಿದ್ದು ಹೋಗಿರಬೇಕು. 'ಅನ್ಯಾಯವಾಯಿತು, ಎಂಥ ದುರದೃಷ್ಟಶಾಲಿ' ಎಂದುಕೊಂಡೆ ಮನಸ್ಸಿನಲ್ಲಿ ಗುಂಡೇಶನನ್ನು ಯಾವುದೋ ಮೂಲೆಯಲ್ಲಿ ಮಲಗಿಸಿರಬಹುದು. ಮುಖದ ಮೇಲೆ ಬೆಡ್‌ಷೀಟ್ ಹೊದಿಸಿರಬಹುದು. ಕ್ರೈಮ್ ಡೈರಿಯ 307 ನೇ ಎಪಿಸೋಡಿನಲ್ಲಿ ಹೀಗೆ ತೋರಿಸಿದ್ದರು: ಖಾಲಿ ಕುರ್ಚಿ ಸಾಲು - ದಿಂಬುಗಳು ಉಲ್ಟ ಆಗಿರುವ ಸೋಫಾಸೆಟ್ಟು - ಗೋಡೆ ಮೇಲೆ ಪೆಂಡುಲಂ ಗಡಿಯಾರ - ಹೂದಾನಿಯಿಂದ ಕೆಳಗೆ ಬಿದ್ದು ಹೋಗಿರುವ ಬಾಡಿದ ಹೂಗೊಂಚಲು - ರೂಮಿನಿಂದ ಹೊಸಲು ದಾಟಿಕೊಂಡು ಹೊರಬರುತ್ತಿರುವ ಒಂದು ಕರಿಬೆಕ್ಕು - ಬೆಡ್‌ಷೀಟ್ ಹೊದ್ದುಕೊಂಡು ಮಲಗಿರುವ ಒಂದು ಶವ!, ಶಿವಶಿವ, ಗಾಬರಿಯಿಂದ ಬೆಚ್ಚುಬಿದ್ದು ಸುತ್ತಲೂ ಕಣ್ಣಾಡಿಸಿದೆ ಮೇಲೆ ಕೆಳಗೆ! ಗುಂಡೇಶ್ ದಡದಳ್ಳಿ ಕೊನೆಯುಸಿರೆಳೆದ ಸ್ಪಾಟ್ ನನ್ನ ದೃಷ್ಟಿಗೆ ಬೀಳಲೇ ಇಲ್ಲ!

ಗಂಟೆ 9 ಆಯ್ತು. ಕಾಲ ನನ್ನ ಅಂದಾಜಿನಂತೆ ಸರಿಯಾಗೇ ಇತ್ತು. ದೇವರ ದಯೆ. ಗುಂಡೇಶ್ ಒಳ ರೂಮಿನ ಬಳಕುವ ತೆರೆಯನ್ನು ಪಕ್ಕಕ್ಕೆ ಸರಿಸಿ ನಿಧಾನವಾಗಿ ದುರ್ಬಲ ಹೆಜ್ಜೆಗಳನ್ನಿಡುತ್ತ ತಲೆ ಕೆದರಿಕೊಂಡು ಮುಂದು ಮುಂದಕ್ಕೆ ನಡೆದು ಬಂದ ನಿರ್ಜೀವ ಶವದಂತೆ! ಅವನ ಮುಖದಲ್ಲಿ ಉಲ್ಲಾಸವಿರಲಿಲ್ಲ, ಕಣ್ಣುಗಳಲ್ಲಿ ಮೊದಲಿನ ಹೊಳಪಿರಲಿಲ್ಲ, ಶಂಖ ಪಾಷಾಣವಿರಬಹುದೆ? ಇಲಿ ಪಾಷಾಣವಿರಬಹುದೆ? ಅಂತೂ ಯಾವುದೋ ನಾಟಿ ವಿಷ ಪ್ರಾಶನದ ಚಿಹ್ನೆಗಳೆ ಇವು? ಅಥವಾ ನನ್ನನ್ನು ನೋಡಿ ಹೀಗೆ ಸಪ್ಪೆ ಮುಖ ಹಾಕಿದನೆ? ನನಗೆ ಹೇಳಲು ಬರದು. ಕುಶಲ ಸಂಭಾಷಣೆ ನೀರಸವಾಗಿ ಮುಕ್ತಾಯಗೊಂಡಿತು. ನೆನಪುಗಳೂ ಅವನ ನೆರವಿಗೆ ಬರಲಿಲ್ಲ. ವಿಷದ ತೀಕ್ಷ್ಣತೆ ಮಿದಳಿಗೆ ತಟ್ಟಿರಬೇಕು!


ಅಡಿಗೆಯವನು ರಾತ್ರಿ ಊಟಕ್ಕೆ ಸಿದ್ಧ ಮಾಡಿದ. ನಾವು ಊಟಕ್ಕೆ ಕೂತಾಗ ರಾತ್ರಿ 9.40 ಗೋಡೆ ಗಡಿಯಾರ ಒಂದುಸಲ ಮಾತ್ರ ಲೇಟಾಗಿ ಠಣ್ ಅಂತ ಬಡಿಯಿತು. ಒಳಗೊಂದು - ಹೊರಗೊಂದು! ಇಲ್ಲೇ ನೋಡಿ ಎವಿಡೆನ್ಸ್ ದಾರಿ ತಪ್ಪೋದು. ದಡದಳ್ಳಿಗೂ ಬಾಳಿನಲ್ಲಿ ಬೇಸರವಾಗಿರಬೇಕು. ತುಂಬ ಸುಸ್ತಾದವನಂತೆ ಕಾಣುತ್ತಿದ್ದ. "It is half-past" ಎಂದ! "Future is uncertain" ಎಂದೆ ನಾನು!

ಗುಂಡೇಶಿ ಮುಖದಲ್ಲಿ ಜೀವಕಳೆ ಇಲ್ಲದಿದ್ದರೂ ಊಟ ಮಾತ್ರ ನನಗೋಸ್ಕರ ಭರ್ಜರಿಯಾಗಿ ಏರ್ಪಾಡು ಮಾಡಿಸಿದ್ದ. ಅಡಿಗೆಯವನಿಗೆ ಎರಡು ದಿವಸದ ಹಿಂದೆ ಹೇಳಿರಬೇಕು ಅಂತ ನನ್ನ ಊಹೆ. ಅವನು ರಿಟೈರ್ಡ್ ಜಡ್ಜ್, ನಾನು ವೃತ್ತಿನಿರತ ಲಾಯರು. ಅವನು ಅನ್ಯ ಮನಸ್ಕನಾಗಿದ್ದರೂ ಒಂದೊಂದಾಗಿ ಐಟಂಗಳನ್ನು ಬಡಿಸುವಂತೆ ಅಡಿಗೆಯವನಿಗೆ ಆದೇಶ ಕೊಡುತ್ತಿದ್ದ. ದೇಶ ಕೋಶ ಕಾಣದ ನಾನು ಅವನ ಹಳೇ ಕಥೆಗಳನ್ನು ಜ್ಞಾಪಿಸಿಕೊಂಡು ಕೊಂಚ ಆತಂಕಕ್ಕೊಳಗಾಗುತ್ತಿದ್ದೆ! ತಟ್ಟೆಯಲ್ಲಿ ಬಗೆ

ಬಗೆಯ ರುಚಿಗಳು. ಸೊಪ್ಪು ತರಕಾರಿಗಳ ಜತೆಗೆ ತಲೆ, ಕಾಲು, ಮೊಟ್ಟೆ, ಮೀನು ಇತ್ಯಾದಿ! ಅವನಿಗುಂಟು, ನನಗಿಲ್ಲ! ದಡದಳ್ಳಿ ಫಿಷ್ ಕರಿಯನ್ನು ಮುಟ್ಟಲೇ ಇಲ್ಲ. ಕೊನೆತನಕ ನಾನು ನಿಗಾ ಇಟ್ಟು ಗಮನಿಸುತ್ತಲೇ ಇದ್ದೆ. ನನಗೂ ತಲೆಯಲ್ಲಿ ಏನೋ ಮಿಂಚಿದಂತಾಗಿ ಟೊಮಾಟೋ ಸೂಪನ್ನು ನಾನೂ ಕುಡೀಲಿಲ್ಲ! ಇದಕ್ಕೆ ನನ್ನ ಜಾಗ್ರತ ಮನಸ್ಸೇ ಕಾರಣ. ಒಂದು ಪಕ್ಷ ಯಾವುದಾದರೂ ಲಘು ಪಾಷಾಣ (ಈ ಲಘು ಬರಹದಂತೆ) ಆಹಾರ ಪದಾರ್ಥಗಳಿಗೆ ಸೇರಿದ್ದು ಕೊಲೆ ಸಂಚು ಏನಾದರೂ ಹೊರಬಿದ್ದರೆ ಅಟ್‌ಲೀಸ್ಟ್ ಈ ಎರಡು ಐಟಂಗಳನ್ನಾದರೂ ರಸಾಯನಿಕ ಪರೀಕ್ಷೆಗಳಿಂದ ಕೈಬಿಡಬಹುದಲ್ಲ ಎಂಬುದೇ ನನ್ನ 'ಫೊರಾನ್ಸಿಕ್' ತಲೆಯ ಮುಂದಾಲೋಚನೆ. ದಂಡುಪಾಳ್ಯದ ಅಡಿಗೆಯವನು ಕತ್ತನ್ನಾಗಲೀ, ನಾಲಿಗೆಯನ್ನಾಗಲೀ ಅಲ್ಲಾಡಿಸಲೇ ಇಲ್ಲ. ಅವನು ಎರಡೂ ಕೈಗಳಲ್ಲಿ ಚಿತ್ತಾರದ ಮದ್ಯದ ಬಟ್ಟಲುಗಳನ್ನು ತಂದು ಮುಂದಿಟ್ಟ. ಗ್ಲಾಸುಗಳು ಕುಲುಕುತ್ತ ಬಳುಕುತ್ತ ಚಿಯರ್ಸ್ ಹೇಳಿದವು. ಗ್ಲಾಸಿನ ಹೊರಮೈ ಮೇಲೆ ಗುಂಡೇಶ ತನ್ನ ಬೆರಳುಗಳ ಗುರ್ತನ್ನು ಒತ್ತಿದ್ದ! ನಾನು ಗ್ಲಾಸನ್ನು ಕಂಠದಲ್ಲಿ ಹಿಡಿದಿದ್ದೆ. ಎಲ್ಲೋ ತೂರಿಕೊಂಡು ಹೋಗುವವನಂತಿದ್ದ ಗುಂಡೇಶಿ. ಮಾತಾಡುವ ಉತ್ಸಾಹ ತೋರಿಸದೆ ಹೋದರೂ ನಾನೇ ಏನಾದರೂ ಮಾತನ್ನು ತೆಗೆಯುತ್ತಿದ್ದೆ. ಚಟರ್ಜಿಯನ್ನು ನೇಣು ಹಾಕಿದ್ದು, N.D.T.V. ನಡೆಸಿದ ಬಿಗ್‌ಫೈಟ್, ಹಿತನ್ ಶಾಲೆಯ ಹುಡುಗಿಯರು ಪ್ರಿನ್ಸಿಪಾಲರು ಹೂಡಿದ್ದ ವಾದ, ಕೊಲೆಯ ಸುತ್ತ ಪತ್ರಿಕೆಗಳಲ್ಲಿ ನಡೆದ ತಾರ್ಕಿಕ ಚರ್ಚೆ ಮುಂತಾದುವನ್ನು ನಾನೇ ಬಟ್ಟಲು ಖಾಲಿಯಾದಂತೆಲ್ಲ ತುಂಬುತ್ತಿದ್ದೆ. ಇನ್ನೇನು ಮನೆಯಂಗಳದ ಮಾತು ಮುಗಿಯಿತು ಎನ್ನುವ ಹೊತ್ತಿಗೆ ಅವನೇ ಯಾವುದೋ ಹಳೆ ಕ್ರಿಮಿನಲ್ ಕೇಸನ್ನು ಜ್ಞಾಪಿಸಿಕೊಂಡು 'ಕಾರ್ಪೊರೇಷನ್ ತೊಟ್ಟಿಯಲ್ಲಿ ಮನುಷ್ಯನ ಕೈಕಾಲುಗಳ ಕತ್ತರಿಸಿದ ಭಾಗ ಸಿಕ್ಕಿದ್ದು ನಿನಗೆ ಗೊತ್ತೆ?' ಎಂದ. ನನಗೇ ಸ್ವಲ್ಪ ಭಯ ಆಯಿತು. ಯಾಕೆಂದರೆ ನನ್ನ ಇನ್ನೊಬ್ಬ ಗೆಳೆಯನ ಕೈ ತುಂಬಾ ಉದ್ದ. ಹೆದ್ದಾರಿ ಯೋಜನೆಯಡಿ ಭೂ ಸ್ವಾಧೀನಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದ. ಹೈವೇ ಸುತ್ತ ಎಲೆಕ್ಷನ್‌ನಲ್ಲಿ ಸೋತ ರಾಜಕಾರಣಿಗಳ ಕಾಟ. ಈ ಗೊಂದಲದಲ್ಲಿ ಸಿಕ್ಕಿಬಿದ್ದ ನನಗೆ ಊಟವಾದ ಮೇಲೆ ದಡದಳ್ಳಿ ಅವನ ದಿನನಿತ್ಯದ ಅಭ್ಯಾಸದಂತೆ ಕಾಫಿ ಕುಡಿದನೋ ಇಲ್ಲವೋ ಎಂಬುದನ್ನು ನಾನು ಗಮನಿಸಲಿಲ್ಲ. ಟೈಮ್‌ನ್ನೂ ಗುರ್ತು ಹಾಕಿಕೊಳ್ಳಲಿಲ್ಲ. ಇಲ್ಲಿ ಸ್ವಲ್ಪ (ಪತ್ತೆ) ದಾರಿ ತಪ್ಪಿತೆಂದು ನನಗೆ ಭಾಸವಾಯಿತು! ಇಬ್ಬರಿಗೂ ಮಾತಾಡುವ ಮೂಡಿರಲಿಲ್ಲ. 'ಹನ್ನೊಂದು ಹೊಡೆಯಿತಲ್ಲವೆ'? ಎಂದ ಅವನು. 'ಹನ್ನೆರಡು ಹೊಡೆಯಿತಲ್ಲ' ಎಂದೆ ನಾನು. ಗುಡ್ ಮಾರ್ನಿಂಗ್ ಹೇಳಿ ನಾನು ಟ್ಯಾಕ್ಸಿ ಹಿಡಿದು ಮನೆ ಕಡೆ ಹೊರಟೆ. ಟ್ಯಾಕ್ಸಿ ನಂಬರನ್ನು ತಕ್ಷಣ ಬರೆದಿಟ್ಟುಕೊಂಡೆ. ಸೀಟಿನ ಮೇಲು ಹೊದಿಕೆ ಮೇಲೆ XXX ಮಾರ್ಕ್ ಮಾಡಿದೆ. ಟ್ಯಾಕ್ಸಿ ಈಗ ಎಲ್ಲಾದರೂ ಬಿದ್ದಿರಲಿ ನಾನು ಅದನ್ನು ಗುರ್ತಿಸಬಲ್ಲೆ. ಡ್ರೈವರ್

ಮುಖದ ಮೇಲೆ ಒಂದು ಕಪ್ಪು ಮಚ್ಚೆ ಇದೆ. ಅವನು ನನ್ನಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ!

ಇದೆಲ್ಲ ಆಗಿ ಮೂರು ದಿನ ಆಯ್ತು. ಬೆಳಿಗ್ಗೆ ಪೇಪರ್‌ನ್ನು ಓದಲು ಕೈಗೆತ್ತಿಕೊಂಡಾಗ ನಡುಕ ಪ್ರಾರಂಭವಾಯಿತು. ಅವತ್ತು ಮೂರು ಕೊಲೆ ನಡೆದಿದ್ದರೂ ಬಾಡಿ ಸಿಕ್ಕಿದ ಪ್ರಕರಣ ಯಾವುದೂ ಪ್ರಕಟವಾಗಿರಲಿಲ್ಲ. ಗುಂಡೇಶ ಅವತ್ತು ರಾತ್ರಿ ಮಲಗಿದ್ದವ ಬೆಳಿಗ್ಗೆ ಎಂದಿನಂತೆ ಎದ್ದು ವಾಕಿಂಗ್ ಹೋಗಿ ಬಂದಿರುತ್ತಾನೆಂದು ನಾನು ನಂಬಿದ್ದೇನೆ. ಆದರೂ ಗುಂಡೇಶ್ ದಡದಳ್ಳಿ ಕೊಲೆ ಪ್ರಯತ್ನ ಅವತ್ತು ನಡೆದಿರಬಹುದೆಂಬುದಕ್ಕೆ ನನ್ನ ಬಳಿ ಸಾಕಷ್ಟು ಸಾಕ್ಷ್ಯ ಇದೆ. ಆದರೆ ಅವನ ಬಾಡಿ ಯಾರಿಗೂ ಸಿಕ್ಕಿಲ್ಲವಾದ್ದರಿಂದ, ಪೋಸ್ಟ್ ಮಾರ್ಟಂ ಆಗಿಲ್ಲವಾದ್ದರಿಂದ ಅವನು ಕೊಲೆಯಾಗಿಲ್ಲವೆಂಬ ಮಾತು ಸತ್ಯ. ಬಾಡಿ ಎಲ್ಲಾದರೂ ಪೊಲೀಸಿನವರಿಗೆ ಸಿಕ್ಕಿ ಕ್ರೈಮ್ ಸ್ಟೋರಿ ಸೀರಿಯಲ್‌ಗೆ ಸೇರ್ಪಡೆಯಾದರೆ ನಾನು ಸಾಕಷ್ಟು ಸಾಂದರ್ಭಿಕ ಸಾಕ್ಷ್ಯವನ್ನು ಒದಗಿಸುವುದಕ್ಕೆ ಸಿದ್ಧ. ನನಗೆ ಟೊಮೇಟೋ ಸೂಪ್ ಗೊತ್ತು. ಫಿಷ್‌ಕರಿ ಗೊತ್ತು. ಫಿಂಗರ್ ಪ್ರಿಂಟ್ ಗೊತ್ತು. ಟ್ಯಾಕ್ಸಿ ನಂಬರು ಗೊತ್ತು. ಟ್ಯಾಕ್ಸಿ ಡ್ರೈವರ್ ಗೊತ್ತು. ಗಂಟೆ ಹೊಡೆದ ಗೋಡೆ ಗಡಿಯಾರ ಗೊತ್ತು. ಬೆಕ್ಕು ಗೊತ್ತು. ಕುಕ್ ಗೊತ್ತು. ಇದಕ್ಕಿಂತ ಹೆಚ್ಚು ಸಾಕ್ಷ್ಯ ಇನ್ನೇನು ಬೇಕು 'ಮರ್ಡರ್'ಗೆ!



"ಯಾರು ಬೇಕಾಗಿತ್ತು ?"

ದೇವೋ ದುರ್ಬಲ ಘಾತಕಃ

- ಬಿ.ಎಚ್. ಕುಲಕರ್ಣಿ

''ನಿಮಗೆ ಭಾಳ ಧೈರ್ಯಾರೀ'' ಅಂದರು ಧೈರ್ಯಾ ಕಳಕೊಂಡವರೆಲ್ಲಾ. ತನ್ನಲ್ಲಿಲ್ಲದ ಧೈರ್ಯ ಇದ್ದಾಂಗ ಅನಿಸ್ತು ಮುದ್ದನಿಗೆ. ಬಹಳ ಮಂದಿ ಕೂಡಿದ್ದರು ಮುದ್ದನ ಸುತ್ತಲೆ. ಮಂದಿ ಒಳಗ ಪ್ರತಿಯೊಬ್ಬನೂ ತನ್ನ ಇರುವಿಕೆ ಗೊತ್ತಾಗಲಿ ಅಂತ ಏನೇನೋ ಮಾತಾಡಲಿಕ್ಕೆ ಹತ್ತಿದ್ದರು.

''ನೀವು ಜೋರಲೇ ಒದರಿದ್ದು ನನಗs ಕೇಳಿಸ್ತು. ಹಾಂಗ ಬಹುತೇಕ ಐದಾರ ಮಂದಿ ಇರಬೇಕು, ಇದs ಹಾದೀಲೇ ಓಡಿದ್ದು ಸ್ವತಃ ನಾನs ನನ್ನ ಮನೀ ಕಿಡಕ್ಯಾಗಿಂದ ನೋಡಿದೆ'' ಅಂತ ಅಂದಾವ ರಾಮಚಂದ್ರರಾಯ.

ಜಗತ್ತಿನ್ಯಾಗ ಎಲ್ಲೇ ಏನೇ ನಡದ್ರೂ ಅದು ನನ್ನಿಂದಲೇs, ಇಲ್ಲಾ ನನಗs ಮೊದಲು ಗೊತ್ತಾಗ್ತದ ಅನ್ನುವ ಈ ರಾಮಚಂದ್ರರಾಯ ಮುದ್ದನ ನೆರೆಮನೆಯವ. ಒಮ್ಮೆಂತೂ 'ಹಿತ್ತಲಮನಿ ತಾರಕ್ಕಗೆ ಗಂಡು ಹುಟ್ಟಿತು' ಅಂತ ಯಾರೋ ಅಂದದಕ್ಕ, ಅಭ್ಯಾಸ ಬಲದಿಂದ 'ಅದಕ್ಕೆ ನಾನೆs ಕಾರಣ' ಅಂದ ರಾಮಚಂದ್ರರಾಯನೂ ಹತ್ತು ದಿನಾ ದವಾಖಾನೆಯೊಳಗಿದ್ದು ಕೈಕಾಲು ಗಟ್ಟಿ ಮಾಡಿಕೊಂಡು ಬಂದದ್ದು ಸ್ವಲ್ಪ ದಿನದ ಹಿಂದನs.

''ಏನ ಧ್ವನಿರೀ ನಿಮ್ಮದು. ಆಹಾ! ಎಂಥಾ ಸಿಂಹ ಕಂಠ; ಆ ಧ್ವನಿ ನನಗಿದ್ದಿದ್ದರ, ನಾ ಇವತ್ತ ದೊಡ್ಡ ಗಾಯಕನಾಗಿ ಸಂಗೀತ ಕಚೇರಿ ನಡೆಸಿರತ್ತಿದ್ದೆ'' - ಇಂವ ಪುರುಷೋತ್ತಮ. ಹಗಲೆಲ್ಲಾ ನೌಕರಿಗೆ ಹೋಗ್ತಿದ್ದ ಈ ಪುರುಷೋತ್ತಮ, ರಾತ್ರಿ ಮುರುಕ ಹಾರ್ಮೋನಿಯಂ ಹಿಡಕೊಂಡು ಕೀರಲು ಧ್ವನಿಯೊಳಗೆ ರಾತ್ರಿ ಎರಡು ಘಂಟೆ ತನಕಾ ಒಂದ ಸವನೆ ಚೀರತಿದ್ದಾ. ಇವನ ಮ್ಯಾಲ ಓಣ್ಯಾಗಿನ ಮುಂದೆಲ್ಲಾ ಸಿಟ್ಟಿಗೇಳತಿದ್ದರು. ಆದರ ಏನೂ ಮಾಡೋ ಹಾಂಗಿರಲಿಲ್ಲಾ, ಯಾಕಂದ್ರ ಮನಷ್ಯಾ ಬಾಳ ಛಲೋ. ಒಮ್ಮೆಂತೂ ಹಿಂಗಾತಲಾ, ಪುರುಷೋತ್ತಮನ ಮನೆ ಮಗ್ಗುಲಿನ ಸಾತಪ್ಪನ ಮನ್ಯಾಗಿನ ಹಣ್ಣು ಹಣ್ಣು ಮುದಕಿ ಸತ್ತಿತು. ಅವಳ ಸಾವು ಸಕಾರದ್ದಾಗಿತ್ತು. ಆದರೂ 'ಮುದುಕಿಯ ಸಾವು ಪುರುಷೋತ್ತಮನ ಚೀರುವಿಕೆಯಿಂದನs' ಅಂತ ಪುರುಷೋತ್ತಮನ ಮ್ಯಾಲ ಸೇಡ ತೀರಿಸಿಕೊಳ್ಳಲಿಕ್ಕೆ ಹೇಳಿಕೋತ ತಿರುಗಾಡಿದ ಸಾತಪ್ಪ ಮುಂದ ಆರು ತಿಂಗಳ ತನಕಾ.

''ತುಡುಗರು ಮನಿಗೆ ಬರ್ತಾರಂತ ಮೊದಲs ಗೊತ್ತಿದ್ರ ಎಲ್ಲಾ ಲೈಟ ಯಾಕ ಹಚ್ಚಿಡಬಾರದಾಗಿತ್ತೋ ತಮ್ಮಾ?'' ಮಾಜಿ ಸುಹಾಸಿನಿ ತಂಗೆವ್ವನಿಂದ ಬೋಧನೆ.

ಇಲ್ಲಿ ತನಕಾ ಆಗಿದ್ದಷ್ಟೆ, ರಾತ್ರಿ ಮೂರು ಘಂಟೆ ಹೊತ್ತಿನ್ಯಾಗ ಮುದ್ದನ ಮನೆಯ ಕಿಡಕಿಯನ್ನು ತುಡುಗರು ಒಡಿಲಿಕ್ಕೆ ಹತ್ತಿದ್ದರು. ಗಾಬರಿಯಾದ ಮುದ್ದ ತಾ ಏನ ಮಾಡಲಿಕ್ಕೆ ಹತ್ತೀನಿ ಅನ್ನೂದು ಗೊತ್ತಾಗದ ಜೋರಾಗಿ ಒದರಿದ್ದ. ಆ ಒದರುವಿಕೆಗೆ ತುಡುಗರು ಓಡಿಹೋಗಿದ್ದರು. ಆ ಮ್ಯಾಲ ಮಂದಿ ಕೂಡಿದ್ದರು. ಕೂಡಿದ್ದ ಮಂದಿ ಮಾತಾಡಿದ್ದರು ಮತ್ತು ಇನ್ನೂ ಮಾತಾಡ್ಲಿಕ್ಕೆ ಹತ್ತಿದ್ದರು.

''ನಿಮಗೆ ತುಡುಗರು ಬಂದಿದ್ದು ಹ್ಯಾಂಗ ಗೊತ್ತಾತು'' ಮಂದಿಯೊಳಗಿನ ಒಬ್ಬ ಕೇಳಿದ.

''ಅವರ ಬಂದ್ರಂತ ಗೊತ್ತಾತು'' ಎಂದ ಮುದ್ದ.

''ಹಾಂಗ ಅಲ್ಲರೀ, ನಿಮಗೆ ಮೊದಲು ತುಡುಗರು ಬಂದಾರಂತ ಹ್ಯಾಂಗ ಗೊತ್ತಾತುೱ ಅಂತ''

''ನನಗೇನೋ ಸಪ್ಪಳಾಧಾಂಗ ಆತು. ಯಾರೋ ಬಂದಿರಬೇಕೆಂತ ಅನಿಸ್ತು. ಹೋಗಿ ನೋಡಿದೆ ಆವಾಗ ಗೊತ್ತಾತು''

''ರ್‍ರೀ ನೀವೆಲ್ರಿ ನೋಡಲಿಕ್ಕೆ ಹೋದ್ರಿ? ನೀವು ಸಪ್ಪಳಾದ ಕೂಡ್ಲೆ ಮುಸುಕ ಹಾಕಿ ಮಲಕ್ಕೊಳಿಲ್ಲ? ಹಾಂ! ನಾನೱ ಅವರನ್ನೆಬ್ಬಿಸಿ ಕಳಿಸಿದೆ. ಅಂದಲ್ಲೇ ಗೊತ್ತಾತು.'' ಹಿಂದಿನಿಂದಲೇ ಪ್ರಚಾರ ಪ್ರಿಯತೆಯ ಸಹಜ ಪ್ರವೃತ್ತಿಯಿಂದ ಹೇಳಿದಳು ಮುದ್ದನ ಹೆಂಡತಿ.

''ನಿಮ್ದು ಮನೀ ವಳ್ಯಾಕ ಒಂದು ನಾಯಿ ಸಾಕ್ರಿ. ಮನಶ್ಯಾರಕಿತಾ ಭೇಷ ನಂಬಿಕೇವು'' ಡ್ರೈವರ ಇಸ್ಮಾಯಿಲ್‌ನ ಬೋಧನೆ.

ವಿಶ್ವಾಮಿತ್ರ ಗೋತ್ರದ ಶಿಷ್ಠ ಬ್ರಾಹ್ಮಣ ಮುದ್ದ. ನಾಯಿನ್ನ ಹಾದ್ಯಾಗ ನೋಡಿದ್ರನೱ ಜಳಕಾ ಮಾಡುವವ, ಇನ್ನ ಮನ್ಯಾಗೱ ನಾಯಿನ್ನ ಸಾಕಿದ್ರ ನೀರಾಗ ಕೂಡಬೇಕಾದದ್ದನ್ನು ನೆನಿಸಿ ಗಡಗಡ ನಡುಗಿದ. ಕೂಡಲೇ ಸಿಟ್ಟಿನಿಂದ ಒದರಿದ ಇಸ್ಮಾಯಿಲ್‌ನ ಮ್ಯಾಲ.

''ನಾಯಿಗಿಂತಾ ಜೋರಲೇ ನಾನೱ ಬೊಗಳಿರಬೇಕಾದ್ರ ನಮ್ಮನ್ಯಾಗ್ಯಾಕೋ ನಾಯಿ?'' ಅಂತ.

ಇಷ್ಟರಾಗ ಬೆಳಗಾತು. ಹೊರಟುಹೋದರು ಎಲ್ಲಾರು. ಉಳಿದವರು ಮುದ್ದ ಹಾಗೂ ಮುದ್ದನ ಹೆಂಡತಿ.

ಮೂಲಿಯೊಳಗಿನ ಜಮಖಾನಿ ಮ್ಯಾಲೆ ಕುಳಿತಿದ್ದರು ದಂಪತಿಗಳು. ಕಿಟಕಿ ಬಾಗಿಲ ಕಡೆಗೇನೇ ನೋಡಲಿಕ್ಕೆ ಹತ್ತಿದ್ದರು. ಗಾಳಿಲೇ ಸಹಿತ ಸ್ವಲ್ಪ ಸಪ್ಪಳಾದ್ರ ಸಾಕು, ಅದುರಿ ಬೀಳುತ್ತಿದ್ದರು - ಹಾಡ ಹಗಲನ್ಯಾಗನೱ. ಇನ್ನು ರಾತ್ರಿಯಂತೂ ಕೈಯಾಗ ಒಂದು ಕೋಲ ಹಿಡಿದು ಮನಿ ತುಂಬೆಲ್ಲ ತಿರಗತಿದ್ದಾ ಮುದ್ದಾ. ಪ್ರತಿ ದಿನಾ ಹಗಲ ಹೋಗಿ ರಾತ್ರಿ ಬರ್‍ತದ ಅನ್ನುವ ಕಲ್ಪನಾನ ಅವನನ್ನ ಭಯಭೀತನನ್ನಾಗಿಸಿತ್ತು. ಅವನ ಆರೋಗ್ಯವನ್ನು ಹಾಳು ಮಾಡಿತ್ತು. ''ಇದಕ್ಕೇನು ಮಾಡೂದು?'' ಎಂದು ವಿಚಾರ ಮಾಡಿ ಮಾಡೇನೆೱ ಹಣ್ಣಾಗಿದ್ದ ಮುದ್ದ.

''ಅಂಥಾಂಗ, ನಾವ್ಯಾಕ ಒಂದು ನಾಯಿ ಸಾಕಬಾರ್ದು? ಅದು ಮನ್ಯಾಗದ ಅಂದ್ರನ ನಮ್ಗ ಧೈರ್ಯ ಬರ್ಲಿಕ್ಕಿಲ್ಲ?'' ಹೆಂಡತಿಯ ಸೂಚನೆ.

''ಏನಂತೀಯ ನಿ!! ಬ್ರಾಹ್ಮಣರ ಮನ್ಯಾಗ ನಾಯ? ನನ್ನನ್ನೇನು ನರಕಕ್ಕ ಕಳಿಸಬೇಕಂತೀ ಏನು?''

''ಈಗೱ ಸತ್ತು ಸ್ವರ್ಗಕ್ಕೆ ಹೋಗುಕ್ಕಿಂತಾ ಮುಂದ ಸತ್ತು ನರಕಕ್ಕ ಹೋದ್ರ ಏನಂತ'' ಹೆಂಡತಿಯ ಪ್ರ್ಯಾಕ್ಟಿಕಲ್ ಸಲಹೆ.

''ನೀ ಏನರೇ ಹೇಳು. ಈ ಮನ್ಯಾಗ ನಾಯಂತೂ ಬರಾಂಗಿಲ್ಲ.''

'ಅಲ್ರೀ, ನೀವು ನೋಡಿದ್ರ, ಹಗಲಿಡಿ ಕಚೇರಿಗೆ ಹೋಗ್ತೀರಿ. ರಾತ್ರಿ ಇಡೀ ನಿದ್ದಿ ಇಲ್ಲದ ಮನ್ಯಾಗ ತಿರುಗಿ ಜಡ್ಡ ಬೀಳಲಿಕ್ಕೆ ಹತ್ತಿರಿ. ಇಂಥಾದರಾಗ ಮನ್ಯಾಗ ನಾಯಿ ಕಟ್ಟಿದರ ಏನಾಗ್ತದ? ಎಷ್ಟಂದ್ರೂ ಅದೊಂದು ಪ್ರಾಣಿ''.

''ಪ್ರಾಣಿ ಆದ್ರ ಏನು? ಅದೊಂದು ಆಕಳಾಗಿದ್ದರ ಮನ್ಯಾಗ ಕಟ್ತಿದ್ದೆ. ನೀ ಹೇಳೋದು ನಾಯ್ಕ ನಾಯಿ!!''

''ಏನ ಹೇಳ್ತೀರಿ ಬಿಡ್ರೀ. ನಿಮ್ಮ ಗೋತ್ರದ ಮೂಲಪುರುಷ ವಿಶ್ವಾಮಿತ್ರನ್ಕ ನಾಯಿ ಮಾಂಸ ತಿಂದಿದ್ದಾ ಅಂತ ನಾ ಎಲ್ಲೋ ಪುರಾಣದಾಗ ಕೇಳಿದ್ದೆ. ಇಂಥಾದರಾಗ ನಾವು ಬರೇ ಒಂದು ನಾಯಿ ಕಟ್ಟಿದರ ಏನಾಗ್ತದ?''

ದಣಿದು ಹಣ್ಣಾದ ಮುದ್ದನಿಗೆ ಇದೊಂದು ಆಸರೆ ಅನಿಸ್ತು. ನಾಯಿಯನ್ನು ಕಟ್ಟುವ ಅವಶ್ಯಕತೆಯ ಅರಿವು ಮುದ್ದನಿಗಿತ್ತು. ಆದರೆ ಅವನ ಇಲ್ಲಿಯವರೆಗಿನ ಬಲವಾದ ನಂಬಿಕೆಗಳು, ಧರ್ಮಭೀರುತನ, ಅವನನ್ನು ನಾಯಿ ಕಟ್ಟಲು ತಡೆಯುತ್ತಿದ್ದವು. ''ನಾಯಿಯರೇ ಕಟ್ಟಬೇಕು ಆದ್ರ, ಅದು ಧರ್ಮದ ವಿರುದ್ಧ ಆಗಬಾರ್ದು ಅಂದ್ರ ಹ್ಯಾಂಗ?'' ಅಂತ ವಿಚಾರ ಮಾಡೇ ಮಾಡಿದ್ದ. ಇದೊಂದು ಅವನ ಆಂತರಿಕ ಮನಸ್ಸಿನ ತುಮುಲವಾಗಿತ್ತು. ಈ ಆಂತರಿಕ ತುಮುಲವನ್ನು ಶಾಂತ ಮಾಡಲು ನೆಪ ಮಾತ್ರಕ್ಕಾದರೂ ಒಂದು ಬಾಹ್ಯ ಆಸರೆಯ ಅವಶ್ಯಕತೆ ಇದ್ದಂತೆ ಅನಿಸ್ತಿತ್ತು. ಆ ಆಸರೆ ಯಾವದಾದರೇನು? ಇಲ್ಲಿ ಅವನಿಗೆ ಸಿಕ್ಕಿದ್ದು ಆಸರೆ ರೂಪದಲ್ಲಿ, ಅವನ ಹೆಂಡತಿಯು ಹೇಳಿದ ಪೌರಾಣಿಕ ದೃಷ್ಟಾಂತ. ಇದರ ಆಸರೆಯಿಂದ ನಾಯಿ ಕಟ್ಟಲು ಅಣಿಯಾಗಿದ್ದ ಮುದ್ದ.

''ಹೀಗಂತಿ, ಹಾಂಗಾದರ ನಾಯಿ ಸಾಕೂದ ಆದ್ರ ಅದನ್ನ ಮಾತ್ರ ನಾ ಮನೀ ಹೊರಗ್ಕ ಕಟ್ಟಾಂವಾ'' ಅಂತ ಹೊಂದಾಣಿಕೆಯಲ್ಲೂ ಕಠೋರತೆಯನ್ನು ವ್ಯಕ್ತಪಡಿಸಿದ್ದ ಮುದ್ದ.

ನಾಯಿ ಏನೋ ಸಾಕೂದಾತು. ಆದರೆ ಆ ನಾಯಿ ಹ್ಯಾಂಗಿರಬೇಕು. ಏನಿರಬೇಕು ಅನ್ನೂದೇನೂ ಗೊತ್ತಿರದ ಮುದ್ದ, ನಾಯಿ ಅನ್ವೇಷಣೆಗೆ ತೊಡಗಿದ್ದ.

ಯಾರೋ ಒಬ್ಬರು ಹೇಳಿದರು ''ನಾಯಿ ಸಾಕೂದಾದ್ರ ಛಲೋ ಬ್ರೀಡದ್ದ ಸಾಕ್ರಿ. ನನಗೊತ್ತಿರುವವರೊಬ್ಬರ ಕಡೆಗೆ ಒಂದು ನಾಯಿ ಕುನ್ನಿ ಇರಬೇಕು. ನೀವು ಹೋಗಿ ಕೇಳಿ'' ಎಂದು ಅಡ್ರೆಸ್ ಕೊಟ್ಟ.

ಆನಂದದಿಂದ ಅಂದೇ ಹೋಗಿ ನೋಡಿದ ನಾಯಿಕುನ್ನೀನ ಮುದ್ದ. ನೋಡಿದಾ ಅಂದ್ರೇನು? ಮಾರಿ ನೋಡಿದಾ - ಕರಿ ಮಾರಿ, ಮುಖದ ಮ್ಯಾಲ ಕಂದು ಬಣ್ಣದ ಕಲೆ, ನಾಲ್ಕು ಕಾಲು ಓಡ್ಯಾಡತ್ತಿತ್ತು ಅಷ್ಟೆ. ಇನ್ನು ಇದು ಛೊಲೋ ಬ್ರೀಡದ್ದು ಹೌದೊ ಅಲ್ಲೊ ಅಂತ ಹ್ಯಾಂಗ ಪರೀಕ್ಷೆ ಮಾಡಬೇಕನ್ನುದು ಗೊತ್ತಿರಲಿಕ್ಕೆ ಇದೇನು ಕನ್ಯಾಪರೀಕ್ಷೆ ಅಲ್ಲಲ್ಲಾ!!

ಹಾಂ! ಕನ್ಯಾ ಪರೀಕ್ಷೆಯೊಳಗೇನೋ ಮುದ್ದನದು ಎತ್ತಿದ ಕೈ. ಮೊದಲು ನಮಸ್ಕಾರ ಮಾಡಿಸಿಕೊಳ್ಳೋದು ಓಡಿದು ಪೇಪರ ಓದಿಸೋದು, ಹಾಡಾ ಹಾಡಿಸೂದು, ಮತ್ತ

ಇಲ್ಲಿತನಕಾತಾ ಕಡೀಕ ಅವಲಕ್ಕಿ ಚಹಾದ ಹೊತ್ತಿನ್ಯಾಗ ಮಾತಾಡೂ ತನಕಾ ಮುದ್ದನದs ಹಿರಿತನ. ತಾಕತ್ತಿರತಿತ್ತು ಆವಾಗಿನ ಮುದ್ದನ ಮಾತನ್ಯಾಗ. ಆದರ ಈಗ ನಡೆದದ್ದು ನಾಯಿ ಪರೀಕ್ಷೆ. ಏನೂ ಹೇಳೂ ಹಾಂಗಿಲ್ಲ, ಎಲ್ಲಾ ಕೇಳೂದೆ.

ಕುನ್ನಿ ಮಾಲಿಕನಿಗೆ ಮುದ್ದ.

''ನಾಯಿ ಬ್ರೀಡ ಹ್ಯಾಂಗದ?''

''ಪ್ಯೂರ ಬ್ರೀಡ ಇಂಪೋರ್ಟೆಡ್''

''ಇಂಪೋರ್ಟೆಡ್!! ಹಾಂಗಾದ್ರ ಇದು ದೇಶೀ ತುಡುಗರನ್ನು ಹಿಡತದೇನು?'' ಮುದ್ದನ ಆತಂಕ.

''ಏನ ಹೇಳ್ತೀರಿ. ಇದು ರಜಿಸ್ಟರ್ಡ ಡಾಗ''

''ಅಂದರ''

''ಈ ನಾಯಿಯ ಅಪ್ಪ ಯಾರು, ಅಮ್ಮ ಯಾರು, ಅಜ್ಜಿ ಯಾರು ಅಂತ ಹಿಂಗ ಒಂಭತ್ತು ತಲೆಮಾರಿನ ತನಕಾ ಬರೆದಿಟ್ಟಿರತಾರ, ಒಂದು ಕಚೇರಿಯೊಳಗ ಮತ್ತು ಅವು ನೊಂದ ಆಗಿರ್ತವ. ಅವ ಪ್ಯೂವರ ಬ್ರೀಡ್.''

ಮುದ್ದ ಅವಾಕ್ಕಾದ. ವಿಚಾರ ಮಾಡಿದ. ವರ್ಷಕ್ಕೊಮ್ಮೆ ಶ್ರಾದ್ಧ ಮಾಡುವಾಗ ಪ್ರಪಿತಾಮಹನ ಹೆಸರು ನೆನಪಿಸಲಿಕ್ಕೇನೇ ರಗಡ ವ್ಯಾಳ್ಯಾ ಹಿಡಿತದ. ಇಂಥಾದರಾಗ ಇದರ ಒಂಬತ್ತು ಸಂತತಿಗಳ ಹೆಸರು ಅಂದರ .. ನಾಯಿ ಬ್ರೀಡ್ ಭೋಲೋನೇ ಇರಬೇಕು ಹಂಗಾರೆ.

ಹಲ್ಲು ಕಿರಿದು, 'ಈ ಹೆಸರು ನೊಂದ ಮಾಡಿಕೊಳ್ಳುವ ಕಚೇರಿ ಅಂದರ ನಾಯಿ ಸಬ್‌ರಿಜಿಸ್ಟ್ರಾರ ಕಚೇರಿ ಏನು?''

''ಹಾಂಗs ತಿಳಕೊಳ್ರಿ. ನಾಯಿ ಕಿಮ್ಮತ್ತು ನಾಕ ಸಾವಿರ ರೂಪಾಯಿ'' ಸ್ವಲ್ಪ ಸಿಟ್ಟಿನಿಂದಲೇ ಹೇಳಿದ ನಾಯಿಯ ಮಾಲಿಕ.

''ನಾಯಿಗೆ ನಾಕು ಸಾವಿರನ!!? ನಾ ತೊಗೂಳ್ಳೂದು ಆನಿ ಅಲ್ಲಪಾ!''

''ಬೇಕಾದ್ರ ತೊಗೋರಿ ಬ್ಯಾಡಾದ್ರ ಬಿಡ್ರಿ''

ಬಹಳ ಘಟಾಪಟಿಯಾದ ಮೇಲೆ, ಏನರೆ ಆಗಲಿ ನಾ ಆರಾಮ ಇರಲಿಕ್ಕೆ ಒಂದು ನಾಯಿ ಬೇಕು ಅಂತ ನಿರ್ಧಾರ ಮಾಡಿ, ನಾಯಿ ಕುನ್ನಿ ಎತ್ತಿ ಮನೆಗೆ ನಡೆದಿದ್ದ ಮುದ್ದ.

ತಾನು ಕಟ್ಟುವ ನಾಯಿಯನ್ನು ಮನೆಯ ಹೊರಗೆ ಕಟ್ಟಬೇಕೆಂದಿದ್ದ ಮುದ್ದ ನಾಯಿ ತೊಗೊಳ್ಳುಕ್ಕಿಂತಾ ಮೊದಲು. ಆದರ ನಾಯಿಕ್ಕಿಂತಾ ನಾಯಿಗೆ ಕೊಟ್ಟ ನಾಕ ಸಾವಿರಕ್ಕ ಕಿಮ್ಮತ್ತು ಕೊಟ್ಟು ನಾಯಿಯನ್ನು ಮನಿ ಒಳಗ ಬಿಟ್ಟ.

ಹೇಳಿ ಕೇಳಿ ಅದು ನಾಯಿ ಕುನ್ನಿ. ಕುಂಯ್ ಕುಂಯ್ ಮಾಡಕೋತ ತಿರುಗಾಡಿತು ಮನಿತುಂಬ. ಆದರ ಹಿಂದ ಹಿಂದನs ಓಡಾಡಿದ ಮುದ್ದ. ಬ್ಯಾರೆ ಯಾವದರೆ ನಾಯಿ ಇತ್ತಂದ್ರ ಹಿಂಗ ಮಾಡತಿದ್ದನೋ ಇಲ್ಲೊ!!! ಆದರ ಇವತ್ತು ಆ ನಾಯಿ, ಅವನ ನಾಯಿ

ಆಗಿತ್ತು, ಕಿಮ್ಮತ್ತು ನಾಲ್ಕು ಸಾವಿರ ಇತ್ತು. ಅದಕ್ಕ ಅದು ಏನು ಮಾಡಿದ್ರನೂ ಛಂದ ಅನಸ್ತಿತ್ತು ಮುದ್ದನಿಗೆ. ಮನೆಯಲ್ಲಿ ಎಲ್ಲಿಲ್ಲಿ ತಿರುಗ್ಯಾಡತಿತ್ತೋ ಅಲ್ಲಲ್ಲಾ ಹೊಲಸ ಮಾಡಲಿಕ್ಕ ಹತ್ತಿತು. ಮನಿ ಎಲ್ಲಾ ಒಂದು ಸವನೆ ನಾರಲಿಕ್ಕೆ ಹತ್ತಿತು. ಮುದ್ದನ ಪ್ರಾಣಾಯಾಮದ ವೇಳೆ ಹೆಚ್ಚಾಗಲಿಕ್ಕೆ ಹತ್ತಿತು.

ಮೊದಲು ತೆಗೆದುಕೊಳ್ಳುತ್ತಿದ್ದ ಹಾಲಿನ ಪ್ರಮಾಣದಲ್ಲಿ ಅರ್ಧ ಲೀಟರ್ ಹೆಚ್ಚಾಗಿತ್ತು. ಮುದುಕಿಯ ಮೊಸರಿನ ಕೂಡ ಒಂದು ಗಿಂಡಿ ಗೋಮೂತ್ರ ಮನೀಗೆ ಬರಲಿಕ್ಕೆ ಹತ್ತಿತ್ತು. ನಾಯಿ ಎಬ್ಬಿಸಿದ ವಾಸನೆಯ ಕೂಡ ಗೋಮೂತ್ರದ ವಾಸನೆ ಸೇರಿ, ವಾಸನೆಗಳ ಕಾಕ್‌ಟೇಲ ಆಗಿತ್ತು ಮುದ್ದನ ಮನೆಯ ವಾತಾವರಣ.

'ಮೊದಲೇ ಅಳುವವನ ಹೆಂಡತಿ ಸತ್ತಳು' ಅನ್ನೊವ್ಹಾಂಗ ಆ ವಾತಾವರಣದಾಗ ನಾಯಿಗೆ ಸುರುವಾಗಿತ್ತು ಭೇದಿ. ಶಾಖಾಹಾರದ ಪ್ರಬಲ ಪ್ರತಿಪಾದಕನಾಗಿದ್ದ ಮುದ್ದ ಒಂದು ತಿಂಗಳ ವಯಸ್ಸಿನ ಇಂಪೊರ್ಟೆಡ್ ನಾಯಿಗೆ ಹೂರಣದ ಹೋಳಿಗೆ ಹಾಕಿದ. ತಿಂದ ತಾಸಿನ ಮ್ಯಾಲನ ಸುರುವಾಗಿತ್ತು ನಾಯಿಗೆ ಭೇದಿ. ನಾಯಿ ಮನಿಗೆ ಬರೊಕ್ಕಿಂತಾ ಮೊದಲು ಧೂಪ, ದೀಪ ಚಂದನದ ವಾಸನೆಗಳಿಂದ ಕೂಡಿದ್ದ ಈ ವಿಪ್ರನ ಮನೆ ಈಗ ನಾನಾ ತರಹದ ಕೆಟ್ಟ ವಾಸನೆಗಳ ಸಂಗಮ ಆಗಿತ್ತು. ಆ ನಾಯಿಯೋ, ಮೂಲಿಯೊಳಗ ಸುಸ್ತಾಗಿ ಬಿದ್ದಿತ್ತು. ಎರಡು ದಿನಗಳಿಂದ, ಮಾರಿ ಕೆಳಗ ಹಾಕಿ, ಹಿಂಗ ಅಗಳ್ಯಾಡದ ಬಿದ್ದದ್ದು ನೋಡಿದ ಮುದ್ದನ ಕರುಳು ಕಿತ್ತ ಬಂದಾಂಗ ಅನಿಸ್ತು. ದಿನಾಲು ಮನೆಗೆ ಬಂದ ಮ್ಯಾಲ ಬೊಗಳೂದು ಬಿಡ್ತು. ಬಾಲಾ ಸಹಿತ ಅಗಳ್ಯಾಡಿಸದ ಇರೂದು ಕಂಡು ಮುದ್ದ, ನಾಯಿ ಡಾಕ್ಟರ ಕಡೆಗೆ ಓಡಿದ್ದ.

ನಾಯಿಯನ್ನು ಮಲಗಿಸಿದ ಡಾಕ್ಟರ್. ನಾಲ್ಕು ಕಾಲು ಗಟ್ಟಿಯಾಗಿ ಹಿಡಿದಿದ್ದ ಮುದ್ದ. ನಾಯಿಯನ್ನು ನಖಶಿಖಾಂತ ನೋಡಿದ ಡಾಕ್ಟರ. ನಾಯಿ ತನ್ನಲ್ಲಿ ಶಕ್ತಿನೇ ಇಲ್ಲೇನೋ ಅನ್ನೊ ಹಾಂಗ ಬಿದ್ದಿತ್ತು. ಮುದ್ದ ಹಿಡಿಬೇಕು ಅಂತ ನೆಪ ಮಾತ್ರಕ್ಕೆ ಅದರ ಕಾಲು ಹಿಡಿದಿದ್ದ. ಹಿಡಿದಿದ್ರೂ, ಅದೇನು ತನ್ನ ಕಾಲು ಅಳಗ್ಯಾಡಸೂ ಹಾಂಗ ಕಾಣತಿರಲಿಲ್ಲ. ಡಾಕ್ಟರ್ ಬಗ್ಗಿ ನಾಯಿಯ ಹೊಟ್ಟೆಯ ಮ್ಯಾಲಿನ ಚರ್ಮಾ ಹಿಡಿದು ಜೋರಲೆ ಎಳೆದು ಕೈಬಿಟ್ಟ. ಒಂದು ಅರ್ಧದಾಗ ನಾಯಿನ್ನ ತನ್ನ ಶಕ್ತಿ ಎಷ್ಟದನೊ ಅಷ್ಟು ಜೋರಾಗಿ ಚಿವುಟಿದ್ದ. ಬಹಳ ದಿನ ಮ್ಯಾಲ ನಾಯಿ 'ಕುಂಯ' ಎಂದಿತು. ಮುದ್ದನಿಗೆ ಸಮಾಧಾನವಾಯಿತು.

''ನಾಯಿಗೆ ಡಿಹೈಡ್ರೇಶನ್ ಆಗೇದ'' ಡಾಕ್ಟರನೆಂದ.

''ನಾಯಿಗೂ ಡಿಹೈಡ್ರೇಶನ್'' ಅದು ಮನಶ್ಯಾಗಷ್ಟ ಆಗೋದಿಲ್ಲೇನು?''

''ನಾಯಿಗೆ ಸಲೈನು ಕೊಡಬೇಕು''

''ನಾಯಿಗೆ ಸಲೈನ!!'' ಗಾಬರಿಯಾದ ಮುದ್ದ. ಆಕ್ಸಿಡೆಂಟ ಆಗಿದ್ದ ತನ್ನ ಗೆಳೆಯನಿಗೆ ಸಲೈನು ಕೊಡುವಾಗ ನಾಲ್ಕು ತಾಸುಗಳವರೆಗೆ ಸೂಜಿ ಚುಚ್ಚಿದ ಹಾಗಾದಾಗ ಬಹಳ ನೋಯ್ತದ ಅಂತ ಒದ್ರ್ಯಾಡುವಾಗ, ಇಬ್ಬರು ಗಟ್ಟಿಯಾಗಿ ಹಿಡಿದುಕೊಂಡು ನಿಂತದ್ದು ನೆನಪಿಗೆ ಬಂದು ಮುದ್ದನಿಗೆ. ಅಂವಾ ಬೇರೆ ಮನುಷ್ಯಾ. ಆದರೆ ಇಲ್ಲಿರೂದು ನಾಯಿ.

ಆದನ್ಹ್ಯಾಂಗ ನಾಲ್ಕು ತಾಸುಗಳತನಕಾ ಹಿಡಕೊಂಡು ನಿಲ್ಲೋದು ಅನ್ನೋದೆ ಮುದ್ದನ ಗಾಬರಿಗೆ ಕಾರಣವಾಗಿತ್ತು.

''ಸಲೈನ ಅಂದ್ರ ಅಂಜಬ್ಯಾಡ್ರಿ, ಬರಿ ಗ್ಲೂಕೋಜ ಇಂಜೆಕ್ಷನ್ ಅಷ್ಟ'' ಎಂದು ನಯವಾಗಿ ನಕ್ಕ ಡಾಕ್ಟರ, ಇಂಜೆಕ್ಷನ ತಯಾರಿ ಸುರುಮಾಡಿದ್ದ. ಇಂಜೆಕ್ಷನ್ ಕೊಟ್ಟು ತಿರುಗಿ ಹೋಗು ಮುಂದ -

''ನಿಮ್ಮ ನಾಯಿ ಬಾಳ ವೀಕ ಆಗೇದ. ಅದು ಸ್ವಲ್ಪ ಸ್ಟ್ರಾಂಗ ಆಗಬೇಕಾದ್ರ ಅದಕ್ಕ ನೀವು ಮಾಂಸಾ ಹಾಕಬೇಕು. ಇಲ್ಲಾಂದ್ರ ವೀಕ ಆಗಿ ಬ್ಯಾರೆ ರೋಗ ಹತ್ತಿ ಸಾಯಲೂ ಬಹುದು'' ಅಂತ ಹೇಳಿ ಹೋದ.

ಮುದ್ದನ ತಲೆ ತಿರಗಲಿಕ್ಕೆ ಹತ್ತಿತು. ಭೂಮಿನs ಬಾಯಿ ಬಿಟ್ಟಾಂಗ ಅನಿಸ್ತು. ನಾಯಿ ಕಟ್ಟೋದನs ಒಂದು ಪಾಪ ಅಂತ ಗೊತ್ತಿದ್ರೂ ನಾಯಿ ಕಟ್ಟಿದೆನಲ್ಲ!! ವಿಚಾರ ಮಂಥನ ನಡೆದಿತ್ತಾ ಮುದ್ದನ ಮನದೊಳಗೆ.

ಕಟ್ಟಿದ ನಾಯಿ ಮ್ಯಾಲ ಮಮಕಾರ ಬಂದು ತನ್ನ ಜೀವನದ ಒಂದೊಂದೇ ತತ್ವಗಳನ್ನೆಲ್ಲಾ ಹೊಂದಾಣಿಕೆ ಮಾಡಿಕೋತಾ ಹೋದೆ. ಈಗ ಇದೆಂಥಾ ಧರ್ಮಸಂಕಟ!!! ನಾನು ಮಾಂಸ ತಂದ ಹಾಕದಿದ್ದರ ಈ ನನ್ನ ನಾಯಿ ಸಾಯ್ತದ. ಮಾಂಸಾ ತರಬೇಕಂದ್ರ, ಬ್ಯಾರೆ ಒಂದು ಕುರಿಮರಿನ್ನ ಕೊಂದ್ಹಾಂಗ. ಈ ನನ್ನ ನಾಯಿಮರಿನ್ನ ಬದುಕಿಸಲಿಕ್ಕೆ ಬ್ಯಾರೆಯವರ ಕುರಿಮರಿನ್ನ ಬಲಿ ತೊಗೊಳ್ಳೋದು ನ್ಯಾಯವೇನು? ನಾಯಿ ಆದರೇನು, ಕುರಿಮರಿ ಆದರೇನು, ಜೀವ ಜೀವನs ಅಲ್ಲೇನು? ಹೌದು, ಜೀವ ಜೀವsನೆ. ಆದರ ನನ್ನ ನಾಯಿ ಜೀವ, ಬೇರೆಯವರ ಕುರಿಮರಿ ಜೀವ ಇದರಾಗ ಫರಕಿಲ್ಲೇನು? ಫರಕ ಅದ ಅಂದ್ರ ಅದು ಸ್ವಾರ್ಥಮಯ ಅದ. ಆದರ ತನ್ನ ಮುಂದಿನ ಮೂರು ತಲೆಮಾರಿನವರು ಆರಾಮ ಇರ್ಲಿ ಅಂತ ಇಂದಿನ ಮೂವತ್ತು ತಲೆ ಹೊಡೆಯುವವರು ಸಮಾಜದಾಗ ತುಂಬಿಲ್ಲೇನು? ಸ್ವಲ್ಪ ವಿಚಾರ ಮಾಡಿದವನಾಗಿ 'ಹೌದು ನನ್ನ ನಾಯಿ ಬದುಕಬೇಕು' - ಒಂದು ನಿರ್ಧಾರಕ್ಕೆ ಬಂದಂತವನಾಗಿದ್ದ ಮುದ್ದ. ನನ್ನದಾಗಿರುವ ನನ್ನ ಕಣ್ಣ ಮುಂದಿರುವ ಈ ನಾಯಿ ಬದುಕಬೇಕು. ಇಲ್ಲಾದರ ಅದನ್ನ ಕೊಂದ ಪಾಪ ನಂಧು. ನನ್ನ ನಾಯಿನ ಬದುಕಿಸಲಿಕ್ಕೆ ನನ್ನ ಕಣ್ಣ ಹಿಂದಿರುವ ಬೇರೆಯವರ ನೂರು ಕುರಿಗಳು ಬಲಿಯಾದರ ನನಗೇನಂತ? ಆ ಪಾಪ ನಂದಲ್ಲ, ಕುರಿ ಕೊಂದವನದು. ಅಲ್ಲದೇ ದೇವರಿಗೆ ಸಹಿತ ಕುರಿಮರೀನೇ ಬಲಿ ಬೇಕಾದಾಗ ನಾ ಎಷ್ಟರವ? ಎಂದು ವಿಚಾರ ಮಾಡಿದ.

ತಾನು ಕುಳಿತಿದ್ದ ಕುರ್ಚಿಯ ಮೇಲಿಂದ ದಿಗ್ಗನೆಂದು ಎದ್ದು ಒಂದು ಕೈಚೀಲ ತೊಗೊಂಡು

ಅಶ್ವಂ ನೈವ ಗಜಂ ನೈವ ವ್ಯಾಘ್ರಂ ನೈವಚ ನೈವಚ ,

ಅಜಾ ಪುತ್ರಂ ಬಲಿಂ ದಧ್ಯಾತ್ ದೇವೋ ದುರ್ಬಲ ಘಾತಕಃ ,,

ಎಂದು ಗೊಣಗುತ್ತಾ ಮಾಂಸಾ ತರಲಿಕ್ಕೆ ಚಪ್ಪಲಿ ಹಾಕಿದ್ದ.

ವ್ಯಾಘ್ರಗೀತೆ - 2

- ಆನಂದ

ಆಗಸ್ಟ್ ಸಂಚಿಕೆಯಲ್ಲಿ ಎ.ಎನ್. ಮೂರ್ತಿರಾಯರ 'ವ್ಯಾಘ್ರಗೀತೆ' ಓದಿದಾಗ ಅದಕ್ಕೊಂದು ಹೊಸ ರೂಪ ಕೊಡಬಹುದೆಂದು ಹೊಳೆಯಿತು. ಹೇಗೂ ಮೂರ್ತಿರಾಯರು ಓದುವುದಿಲ್ಲ ಎಂದು ಖಾತರಿಯಾದ್ದರಿಂದ ಅದನ್ನು ಬರೆಯಲು ತುಸು ಧೈರ್ಯ ಸಹ ಮೂಡಿತು. ಇದಕ್ಕೆ ಬಹುಶಃ ಎಲ್.ಎಸ್. ಶೇಷಗಿರಿರಾಯರ ಆಕ್ಷೇಪ ಇರಲಾರದು ಎಂದು ಭಾವಿಸಿದ್ದೇನೆ.

ನನ್ನ ಹೊಸ ರೂಪದಲ್ಲಿ ಬದಲಾವಣೆ ಪ್ರಾರಂಭವಾಗುವುದು ಅಪರಂಜಿ 15ನೇ ಪುಟದಲ್ಲಿರುವ ಕೊನೆಯ ಪ್ಯಾರಾದಿಂದ.

....., ಚಿಂತಾಮಗ್ನವಾಗಿದ್ದ ಹುಲಿಯೊಂದು ಕುಳಿತಿದೆ... ಈಗ ಈ ನನ್ನ ರೂಪಾಂತರವನ್ನು ಓದಿ:

ಚಿಂತಾಮಗ್ನವಾಗಿದ್ದ ಹುಲಿಯನ್ನು ಶಾನುಭೋಗರು ನೋಡಿದರು. ಅರೆ. ಈ ಪೀಡೆ ಇನ್ನೂ ಇಲ್ಲೇ ಇದೆ. ಇನ್ನು ನನ್ನ ಉಳಿಗಾಲವಿಲ್ಲ ಎಂದು ಅವರು ಭಾವಿಸಿದರು. ಸಾಯಲು ಸಿದ್ಧರಾದರು. ಅದು ಅನಿವಾರ್ಯವೂ ಆಗಿತ್ತು. ನಾಳೆ ಬರುವ ಸಾವು ಇಂದೇ ಬರಲಿ ಅಥವಾ ನನ್ನ ಆಯಸ್ಸು ಇಂದಿಗೇ ಮುಗಿಯುವದೋ ಏನೋ; ಆ ದೇವನಿಗೆ ತನ್ನ ಊರಿನಲ್ಲಿ ಶಾನುಭೋಗಿಕೆ ಮಾಡಲು ನನ್ನ ಅಗತ್ಯ ಬಿದ್ದಿರಬಹುದು; ಆದುದರಿಂದಲೇ ಏನೋ ದಕ್ಷ ಸರ್ಕಾರಿ ಅಧಿಕಾರಿಗಳನ್ನು ಹಠಾತ್ತನೆ ವರ್ಗ ಮಾಡುವಂತೆ ನನ್ನನ್ನು ಮೇಲಿನ ಲೋಕಕ್ಕೆ ಎತ್ತಂಗಡಿ ಮಾಡುತ್ತಿರಬಹುದು ಎಂದು ಶಾನುಭೋಗರ ಯೋಚನಾಲಹರಿ ಅಥವಾ ಚಿಂತಾ ಲಹರಿ ಹರಿಯುತ್ತಿತ್ತು. ಆದರೆ ಇಂತಹ ಅಂತ್ಯವೆ? ಅದೂ ಈ ಕಾಡಿನಲ್ಲಿ. ಹುಲಿಯ ಬಾಯಿಗೆ ಸಿಕ್ಕಿ. ಪಾರ್ಥಿವ ಶರೀರದ ಅರ್ಧಂಬರ್ಧಕ್ಕೆ ಅಂತ್ಯಕ್ರಿಯೆಯೆ? ಆದರೂ ಇದೂ ದೈವ ನಿಯಮವೇ ಆಗಿದ್ದರೆ ಅದಕ್ಕೆ ಅಪೀಲು ಎಲ್ಲಿದೆ?

ಸಾವು ಅನಿವಾರ್ಯ. ಹೀಗೆ ಭೀಕರವಾಗಿ ಸಾಯುವುದೂ ಅನಿವಾರ್ಯ ಆದರೆ ಈ ಖಿರ್ದಿ ಪುಸ್ತಕ ಏನು ಮಾಡುವುದು? ರಾಷ್ಟ್ರದ ಸ್ವತ್ತು. ತಾನು ಪ್ರಾಮಾಣಿಕ ಅಧಿಕಾರಿ. ತನ್ನ ಮಗ ತಮ್ಮಿಂದ ಅಧಿಕಾರ ಪಡೆದರೆ ಸಾಲದು, ಖಿರ್ದಿ ಪುಸ್ತಕವನ್ನೂ ಪಡೆಯಬೇಕು. ಇಲ್ಲದಿದ್ದರೆ ಜನರ ಗತಿ? 'ಸಾಯುವ ಶಾನುಭೋಗ ಸತ್ತ ನಿಜ, ಆದರೆ ಖಿರ್ದಿ ಪುಸ್ತಕಕ್ಕೆ ಏನಾದರೂ ಗತಿ ಕಾಣಿಸಿ ಹೋಗಿದ್ದರೆ?' ಎಂದು ಜನರಾಡಿಕೊಳ್ಳಬಹುದಿತ್ತು. ಹಾಗೆ ಮಾಡಿದರಂತೂ ತಮ್ಮ ಪ್ರತಿಷ್ಠೆ ಊರಿನಲ್ಲಿ ಇನ್ನಷ್ಟು ಹೆಚ್ಚುವುದು ಖಂಡಿತ. ಸಾಯುವಾಗಲೂ ಸಹ ತನ್ನ ಕರ್ತವ್ಯ ಪ್ರಜ್ಞೆಯನ್ನು ಮರೆಯದ ಅಧಿಕಾರಿ ಎಂಬ ಒಕ್ಕಣಿಕೆ ತನ್ನ ಮಗನಿಗೆ ಸರ್ಕಾರದಿಂದ ಬರುತ್ತಿತ್ತೋ ಏನೋ. ಅದನ್ನು ಓದಿ ತನ್ನ ಹೆಂಡತಿ/ಮಗ ಏಕೆ ಊರಿಗೆ ಊರೇ ಕಣ್ಣೀರು ಸುರಿಸಿರಬಹುದು. ತನ್ನ ಕಣ್ಣುಗಳಿಂದಲೂ ಆನಂದ ಬಾಷ್ಪ.... ಛೆ! ಅದ್ಹೇಗೆ ಸಾಧ್ಯ. ಆಗ ತಾನು ಇರುವದೇ ಇಲ್ಲವಲ್ಲ.

ಆದರೆ ಈ ಖಿರ್ದಿ ಪುಸ್ತಕ ಏನು ಮಾಡುವುದು? ಆಗ ಶಾನುಭೋಗರಿಗೆ ಒರಿಜಿನಲ್ ಪುಣ್ಯಕೋಟಿಯ ಕತೆ ನೆನಪಿಗೆ ಬಂದಿತು. ಅದೇನು ಮಾಡಿತ್ತು? ''ತನ್ನ ಕಂದನಿಗೆ ಹಾಲುಣ್ಣಿಸಿ ಬರುತ್ತೇನೆ'' ಎಂದು ಹುಲಿಯನ್ನು ನಂಬಿಸಿ ಬಂದು ಬ್ರೇಕ್ ಪಡೆದುಕೊಂಡು ಹೋಗಿತ್ತು. ತಾನೂ ಹಾಗೆ ಮಾಡಬಾರದೇಕೆ? ಆದರೆ ತಾನೇನು ಸಬೂಬು ಹೇಳುವುದು? ಛೆ! ಸಬೂಬಿಲ್ಲ. ಇರುವ ವಿಷಯವನ್ನೇ ತಿಳಿಸಬೇಕು ಎಂದು ನಿರ್ಧರಿಸಿ, ಧೈರ್ಯ ಮಾಡಿ ''ಹುಲಿರಾಯ. ನಿನ್ನ ಕಷ್ಟ ಅರ್ಥ ಮಾಡಿಕೊಳ್ಳಬಲ್ಲೆ. ನೀನು ನನ್ನ ಮೇಲೆ ಹಾರಲು ಸಿದ್ಧನಿದ್ದೀಯ. ನಾನೂ ನಿನಗೆ ಆಹಾರವಾಗುವುದು ಅನಿವಾರ್ಯ. ಆದರೆ ನನ್ನದೊಂದು ಕೋರಿಕೆ. ಕೇಳುವಿಯಾ?'' ಎಂದು ಯಾಚಿಸಿದರು.

ಹುಲಿ ಸ್ತಂಭೀಭೂತವಾಯಿತೆ? ಏಕೆಂದರೆ ಈ ಮನುಷ್ಯ ''ಪ್ರಾಣ ಉಳಿಸು. ತಿನ್ನಬೇಡ'' ಎಂದು ಗೋಗರೆಯುವ ಬದಲು ಈ ರೀತಿ ಮನವಿ ಸಲ್ಲಿಸುತ್ತಿದ್ದಾನೆ. ಇದೊಂದು ಡಿಫರೆಂಟ್ ಕೇಸ್ ಆಗಿ ತೋರುತ್ತಿದೆ ಎಂದು ಯೋಚಿಸಿದ ಹುಲಿ ಈ ಶ್ಯಾನಭೋಗರಿಗೆ ಒಂದು ಛಾನ್ಸ್ ಕೊಡಲು ನಿರ್ಧರಿಸಿ 'ಸರಿ ಏನು ನಿನ್ನ ಕೋರಿಕೆ' ಹೇಳು ಎಂದಿತು.

''ಈ ಖಿರ್ದಿ ಪುಸ್ತಕವೇ ನನ್ನ ಸಮಸ್ಯೆ'' ಎಂದು ಪೀಠಿಕೆ ಹಾಕಿ ಪುಸ್ತಕದ ಮಹತ್ವ, ತನ್ನ ಜವಾಬ್ದಾರಿ, ತನ್ನ ವಾರಸುದಾರರ ಅಗತ್ಯ, ಜನಗಳ ಅವಶ್ಯಕತೆಗಳನ್ನೆಲ್ಲ ವಿವರಿಸಿ ''ಹುಲಿರಾಯ, ನನಗೊಂದು ಛಾನ್ಸ್ ಕೊಡು. ಊರಿಗೆ ಹೋಗಿ ಈ ಖಿರ್ದಿ ಪುಸ್ತಕವನ್ನು ಒಪ್ಪಿಸಿ ವಾಪಸಾಗುವೆ. ನನ್ನನ್ನು ನಂಬು. ನಾನು ನಿನ್ನ ಆಹಾರ ಇಂದಲ್ಲ ನಾಳೆ'' ಎಂದರು.

ಹುಲಿಗೆ ತಕ್ಷಣ ಉತ್ತರಿಸಲು ಆಗಲಿಲ್ಲ, ಆದರೆ ಶಾನುಭೋಗರ ಮೇಲೆ ಹಾರಲೂ ಇಲ್ಲ. ಇದರಿಂದ ಧೈರ್ಯಗೊಂಡ ಅವರು ''ಹುಲಿಯೇ, ನೀನು ನಿನ್ನ ಕುಲಧರ್ಮ ಪಾಲಿಸುವಂತೆ ನಾನು ನನ್ನ ವೃತ್ತಿ ಧರ್ಮವನ್ನು ಪಾಲಿಸಬೇಕಾಗಿದೆ. ಒಪ್ಪಿಕೋ'' ಎಂದರು.

ಧರ್ಮ ಎಂದಾಕ್ಷಣ ಹುಲಿಗೆ ಪಾಪಪ್ರಜ್ಞೆ ಕಾಡತೊಡಗಿತು. ಛೆ! ನಾನೆಂತಹವನು. ಇಂತಹ ಕರ್ತವ್ಯಶೀಲ ಸರ್ಕಾರಿ ಅಧಿಕಾರಿಯನ್ನು ತಿಂದು ಮುಗಿಸಿದರೆ ಈಗಾಗಲೇ ನಶಿಸುತ್ತಿರುವ ಅಂತಹವರ ಸಂತತಿ ಇನ್ನಷ್ಟು ಕ್ಷೀಣಿಸದೆ? ಆದುದರಿಂದಲೇ ಅಲ್ಲವೆ ಅರಣ್ಯನಾಶ ನಡೆದಿರುವುದು. ಛೆ, ಸಲ್ಲ, ಸಲ್ಲ. ಈ ಶಾನುಭೋಗರನ್ನು ನಾನು ಉಳಿಸಬೇಕು. ಆಗ ಅವರ ಖಿರ್ದಿ ಪುಸ್ತಕವನ್ನೂ ಉಳಿಸಿದಂತಾಗುತ್ತದೆ. ಕಾಡಿನ ಚರಿತ್ರೆಯಲ್ಲಿ ನನ್ನ ಹೆಸರೂ ಉಳಿದಂತಾಗುತ್ತದೆ ಎಂದು ಯೋಚಿಸಿ ''ಸರಿ ನೀವು ಹೋಗಬಹುದು'' ಎಂದು ಹೇಳಿತು.

ಕೆಳಗೆ ಬಿದ್ದಿದ್ದ ಖಿರ್ದಿ ಪುಸ್ತಕವನ್ನು ಕೈಗೆತ್ತಿಕೊಂಡ ಶಾನುಭೋಗರು ಅದಕ್ಕೆ ಅಂಟಿದ್ದ ಮಣ್ಣನ್ನು ಜಾಡಿಸಿ ''ವಿ ವಿಲ್ ಮೀಟ್ ಹಿಯರ್ ಅಗ್ರೈನ್, ಸೇಮ್ ಪ್ಲೇಸ್, ಸೇಮ್ ಟೈಂ, ನೊ?'' ಎಂದು ಹೇಳಿ ಹೊರಡಲನುವಾದರು.

ಆಗ ಹುಲಿ 'ಬೇಡ. ಬೇಡ. ನಾಳೆ ಊಟಕ್ಕೆ ನಾನು ಬೇರೆ ವ್ಯವಸ್ಥೆ ಮಾಡಿಕೊಳ್ಳುತ್ತೇನೆ' ಎಂದು ಹೇಳಿ ಛಂಗನೆ ಕಾಡಿನಲ್ಲಿ ಮರೆಯಾಯಿತು.

★★★

ಹಾಸ್ಯೋತ್ಸವದ ದಶಮಾನೋತ್ಸವ ಸಂಭ್ರಮ

ಹಾಸ್ಯಪ್ರಿಯರೆ,

ನಿಮ್ಮೆಲ್ಲರ ಪ್ರೀತಿ ಹಾಗೂ ಪ್ರೋತ್ಸಾಹದಿಂದಾಗಿ ನಾವು ಹತ್ತು ವರ್ಷದಿಂದ ಹಾಸ್ಯೋತ್ಸವವನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದು ಈಗ ದಶಮಾನೋತ್ಸವ ಸಂಭ್ರಮದಲ್ಲಿದ್ದೇವೆ. ನಮ್ಮೆಲ್ಲ ಕಾರ್ಯಕ್ರಮಗಳಿಗೆ ಬೆಂಬಲವಾಗಿ ನಿಂತ ಎಲ್ಲಾ ಪ್ರಾಯೋಜಕರಿಗೂ ಮತ್ತು ಉತ್ಸಾಹಿ ಪ್ರೇಕ್ಷಕರಿಗೂ ವಂದಿಸುತ್ತಾ ಈ ವರ್ಷದ ಹಾಸ್ಯೋತ್ಸವದ ದಶಮಾನೋತ್ಸವಕ್ಕೆ ಆಹ್ವಾನಿಸುತ್ತಿದ್ದೇವೆ.

ಪ್ರತಿ ವರ್ಷದಂತೆ ಈ ವರ್ಷವೂ ಡಿಸೆಂಬರ್ 25, 2004 ರಂದು ಜಯನಗರದ ನ್ಯಾಷನಲ್ ಕಾಲೇಜಿನಲ್ಲಿ ಹಾಸ್ಯೋತ್ಸವ ನಡೆಯಲಿದೆ. ದಶಮಾನೋತ್ಸವದ ಸಂಭ್ರಮದಲ್ಲಿ ಕೆಳಕಂಡ ಮಹನೀಯರು ಪಾಲ್ಗೊಳ್ಳಲು ಒಪ್ಪಿರುತ್ತಾರೆ.

ಶ್ರೀಯುತರಾದ ಟಿ.ಎನ್. ಸೀತಾರಾಮ್, ಹಿರೇಮಗಳೂರ್ ಕಣ್ಣನ್, ಡುಂಡಿರಾಜ್, ಗಂಗಾವತಿ ಪ್ರಾಣೇಶ್, ಡಾ|| ಬಿ.ವಿ. ರಾಜಾರಾಂ, ಡಾ|| ಬಾನಂದೂರು ಕೆಂಪಯ್ಯ, ಮೈಸೂರು ಆನಂದ್ ಮತ್ತು ಶ್ರೀಮತಿ ಭುವನೇಶ್ವರಿ ಹೆಗಡೆ.

ದಶಮಾನೋತ್ಸವದ ಸಂದರ್ಭದಲ್ಲಿ ಹಾಸ್ಯಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ವಿಶಿಷ್ಟವಾದ ಕೊಡುಗೆ ನೀಡಿರುವ ಶ್ರೀಮತಿ ಟಿ. ಸುನಂದಮ್ಮ ಹಾಗೂ ಶ್ರೀ ಎಸ್.ಎನ್. ಶಿವಸ್ವಾಮಿಯವರಿಗೆ ಗೌರವಾರ್ಪಣೆ ಮಾಡುವ ಕಾರ್ಯಕ್ರಮವಿದೆ.

ಮನರಂಜನೆಗಾಗಿ ಗಾನವಿನೋದಿನಿ ನಮ್ಮೊಂದಿಗಿದ್ದಾರೆ. ಹಾಸ್ಯ ಪುಸ್ತಕಗಳ ಬಿಡುಗಡೆ, ಮಾರಾಟ ಮತ್ತು ಹಾಸ್ಯೋತ್ಸವಗಳ ವಿ.ಸಿ.ಡಿ.ಗಳ ಮಾರಾಟದ ವ್ಯವಸ್ಥೆ ಇರುತ್ತದೆ.

ಪ್ರೊ|| ಅ.ರಾ. ಮಿತ್ರರವರ ಉಸ್ತುವಾರಿಯಲ್ಲಿ ಕಾರ್ಯಕ್ರಮ ನಡೆಯಲಿದೆ.

ಹೆಚ್ಚಿನ ವಿವರಗಳನ್ನು 'ಅಪರಂಜಿ' ಮುಂದಿನ ತಿಂಗಳು ತರಲಿದ್ದಾಳೆ.

ನಿಮಗೆಲ್ಲಾ ಆದರದ ಸ್ವಾಗತ

ಹಾಸ್ಯೋತ್ಸವ-ದಶಮಾನೋತ್ಸವದ ಸಮಿತಿ ಪರವಾಗಿ

ಕೃಷ್ಣ ಸುಬ್ಬರಾವ್ — ಎಂ. ಶಿವಕುಮಾರ್

ಹಾಸ್ಯಬ್ರಹ್ಮ ಟ್ರಸ್ಟ್ — ಕೊರವಂಜಿ ಅಪರಂಜಿ ಟ್ರಸ್ಟ್

ಟ್ರ್ಯಾಜಿಡಿ ಇನ್ ಕಾಮಿಡಿ

- ಶ್ಯಾಮಲಾ ರವಿಶಂಕರ್

ಕನ್ನಡ ಪ್ರಭದ ವಾರ್ಷಿಕೋತ್ಸವ ಸಮಾರಂಭ ರವೀಂದ್ರ ಭಾರತಿಯಲ್ಲಿ ನಡೆಯಲಿದೆ ಎಂದೂ ಇದರ ಅಂಗವಾಗಿ ಕನ್ನಡ ನಾಟಕವೊಂದು ನೋಡಬಹುದೆಂದೂ ವಾರ್ತಾ ಪತ್ರಿಕೆಯಲ್ಲಿ ನೋಡಿದಾಕ್ಷಣ ನನ್ನ ತಲೆನೋವು, ಮಂಡಿನೋವು ಇತ್ಯಾದಿಗಳು ಮಾಯವಾದವು. ಹೈದರಾಬಾದಿನಲ್ಲಿ ಕನ್ನಡ ನಾಟಕ ನಡೆಯುವಾಗ ನಾವಿಲ್ಲದಿದ್ದರೆ ಹೇಗೆ ನಡೆಯುತ್ತದೆ ಎಂದು ಆತುರಾತುರವಾಗಿ ಹೊರಟೆವು. ಟ್ರಾಫಿಕ್‌ಜಾಮ್ ಇಲ್ಲದರ ಸಲುವಾಗಿ ನಾವು 15 ನಿಮಿಷಗಳ ಮುಂಚೆಯೇ ಸಭಾಂಗಣ ತಲುಪಿದೆವು. ಅಲ್ಲೋ ಖಾಲಿ ಕುರ್ಚಿಗಳೇ ಹೆಚ್ಚು ಕಂಡವು. ಕನ್ನಡಾಂಬೆಗಾಗಿ ಕಣ್ಣೀರು ಮಿಡಿಯಿತು ಎಂದು ಹೇಳಬೇಕೆ? ಹಾಗೆ ನೋಡಿದರೆ ನನಗೆ ಒಂದು ರೀತಿಯಲ್ಲಿ ಅನುಕೂಲವೇ ಆಯಿತೆನ್ನಿ. ನಾನು ಅಲ್ಲಿ ಕೂತು ಎದ್ದು, ಇಲ್ಲಿ ಕೂತು ಎದ್ದು, ಇನ್ನೆಲ್ಲೋ ಕೂತು ಎದ್ದು ಮಾಡಿ ಅಂತೂ ಉತ್ತಮವೆನಿಸಿದ ಕಡೆ ಎರಡು ಕುರ್ಚಿಗಳನ್ನು ಆಯ್ದು ಕುಳಿತೆವು.

ಮೆಲ್ಲ ಮೆಲ್ಲನೆ ಜನ ಬರಲು ಪ್ರಾರಂಭಿಸಿದರು. ಹೈದರಾಬಾದಿನ ಹವೆಯೇ ಹಾಗೆ! 'ಕೌನ್ಸ್ ಜಲ್ದಿ ರೈ' ಅನ್ನೋ ಧಾಟಿ. ಹೇಗೂ ಯಾವ ಕಾರ್ಯಕ್ರಮವೂ ನಿಗದಿತ ವೇಳೆಗೇ ಶುರು ಆಗಬೇಕೆಂದು ಯಾವ ನ್ಯಾಯಾಲಯವೂ ಹೇಳಿಲ್ಲ. ಹೇಳಿದ್ದೇ ಆದರೆ, ನಾವು ಅದರ ಮೇಲೆ 'ಸ್ಟೇ' ತಂದರೆ ಆಯಿತು ಅನ್ನೋ ನಂಬಿಕೆ ಇಲ್ಲಿನವರಿಗೆ. ಅಂತೂ ಇಂತೂ ನನ್ನ ಮಿಡಿತದ ಫಲವೋ ಏನೋ 6.40ಕ್ಕೆ ಸುಮಾರಾಗಿ ತುಂಬಿದಂತಿತ್ತು ಸಭಾಂಗಣ.

ಕಾರ್ಯಕ್ರಮ ಸರಿಯಾದ ವೇಳೆಗೆ ಶುರು ಆಯಿತು. ಅದೇ ಹೊತ್ತಿಗೆ ನಮ್ಮ ಹಿಂದಿನ ಸಾಲಿನಲ್ಲಿ 4-5 ವರ್ಷದ ಮಗು ಅಳು ರಗಳೆ ರಚ್ಚೆ ಆಲ್-ಇನ್-ಒನ್ ಗೋ ಅಂತ ತಾರಕ ಸ್ವರದ ಹಿಮ್ಮೇಳವೂ ಪ್ರಾರಂಭ! ಗಂಟಲು ಒಣಗಿದಾಗ ಬಿಕ್ಕಳಿಸುತ್ತಾ ಮಾತಾಡಿದಾಗ ಅವನ ತಾಯಿ 'ಚಿಪ್ಸ್ ಬೇಕಾ ಮರೀ, ಇಗೋ ತಿನ್ನು' ಎಂದು ಪ್ಯಾಕೆಟೊಂದನ್ನು ಅವನ ಕೈಗೆ ಹಾಕಿದಳು. ಭಾಷಣ ನಡೆಯುತ್ತಿದ್ದಂತೆ 'ಕುರುಂ.. ಕುರುಂ..., ಬಿಕ್ಕಳಿಕೆ, ಮೂಗೆಳೆಯುವುದು ನಡೆಯುತ್ತಿತ್ತು. ಹಾಳಾಯ್ತು, ಈ ಪ್ಯಾಕೆಟ್ ಮುಗಿಯುವವರೆಗೂ ತಡೆದುಕೊಂಡರೆ ನಾಟಕ ಶುರುವಾಗೋ ಹೊತ್ತಿಗೆ ಈ ಹಿಮ್ಮೇಳ ನಿಲ್ಲುತ್ತದೆ ಅಂದ್ಕೊಂಡಿದ್ದು ನನ್ನ ಮೂರ್ಖತನ! ಈ ರಾಗ ಈಗಷ್ಟೇ ಪ್ರಾರಂಭ ಎಂದು ಯಾರಿಗ್ಗೊತ್ತು? Time only should prove it. And, prove, it did!

ಆ ಹುಡಗ ಜಾನಿ ಅಲಿಯಾಸ್ ಜಾನಕಿ ರಾಂ, has been born with a good appetite ಅದೂ ಒಳ್ಳೊಳ್ಳೆ ರುಚಿಕಟ್ಟಾದ ತಿನಿಸುಗಳೇ ಬೇಕು. ಒಂದಾದ ಮೇಲೊಂದರಂತೆ ಕ್ಯಾಡ್‌ಬರೀಸ್, ವೇಫರ್ಸ್, ಕ್ರೀಂ ಬಿಸ್ಕತ್ತು, ಐಸ್‌ಕ್ರೀಂ ಕೋನ್‌ಗಳು ಪೆಪ್ಸಿ ಇತ್ಯಾದಿ ಇತ್ಯಾದಿ demand and supply ನಡೀತಾ ಇತ್ತು. ಅದೂ ಸಾಕಷ್ಟು

ಸಶಬ್ದವಾಗಿ! ನಾನು ಎಷ್ಟು ಬಾರಿ ಹಿಂತಿರುಗಿ, ದುರುಗುಟ್ಟಿ ನೋಡಿದೆನೋ ಗೊತ್ತಿಲ್ಲ. ಅದನ್ನ ಹಿಡಿಸ್ಕೊಂಡವರಾದ್ರೂ, ಯಾರು?

ಭಾಷಣಗಳ ಜೊತೆಗೇ ಹಿಂದಿನಿಂದ ಬಂದ ಇನ್ನೊಂದು ಸ್ವರ ಜಾನಿಯ ಅಕ್ಕ (ಅಂತ ಕಾಣ್ಸತ್ತೆ) 'ಮಕ್ಕೀ'ದು. ಮಕ್ಕೀ ಅಲಿಯಾಸ್ ಮಾಲವಿಕಾ, 13-14 ವರ್ಷದ ಹುಡುಗಿ. ಈ ಮಕ್ಕಳ ತಾಯಿ ಮಗನ ಜೊತೆ ಇಂಗ್ಲೀಷು, ಮಗಳ ಜೊತೆ ಹಿಂದಿ ಮತಾಡ್ತಾ ಇದ್ದರು. ಆಕೆಯ ಪತಿ ಕನ್ನಡಾಂಬೆ ಸಾಕ್ಷಾತ್ ಭುವನೇಶ್ವರಿ ದೇವಿಯ ಭಂಟ! ಮಕ್ಕಳ ಪ್ರತಿ ಮಾತನ್ನೂ ಕನ್ನಡದಲ್ಲಿ ಹೇಗೆ ಹೇಳಬೇಕು ಎಂದು ಹೇಳಿಕೊಡುತ್ತಾ ಅವಕ್ಕೆ ಕನ್ನಡದಲ್ಲಿ ಉತ್ತರ ನೀಡಿ ನೀಡಿ ತತ್ತರಿಸಿ ಹೋಗುತ್ತಿದ್ದರು.

ಸ್ಟೇಜಿನ ಮೇಲೆ ನಾಟಕ ನಡೆಯುತ್ತಿತ್ತು. ಮಕ್ಕೀ, 'ಮಾ, ಈ ಎಲ್ಲಾ ಲೋಗೂ ಕನ್ನಡೀ ನಾ?' ಎಂದು ಉಲಿದಳು.

ತಾಯಿ 'ಹಾಂ, ಬೇಟಾ' ಅಂದದ್ದಕ್ಕೆ ನಮ್ಮ ಕನ್ನಡಾಂಬೆಯ ಬಂಟ ಕನಲಿ ಕೆಂಡವಾದರು.

'ಕನ್ನಡಿ, ಅಂತೆ ಕನ್ನಡಿ! ಹುಂ... ಅಧ್ವಾನ ಪದವೇ? ಕನ್ನಡಿಗರಾ? ಅಂತ ಕೇಳು, ಕನ್ನಡಿ ಅಂದರೆ ಆಯಿನಾ, ಕಣೇ, ಮಿರರ್‍ರೂ...' ಆ ಮಾತು ಕೇಳಿದವರಾರು, ನನ್ನ ಬಿಟ್ರೆ? ನಾನೂ ಕೂಡಾ ಬೇಕೂಂತ ಕೇಳಿಸ್ಕೊಂಡ್ನಾ? ಅದೇ ಕಿವಿ ಮೇಲೆ ಬಿತ್ತು, ಅದಕ್ಕೆ ಕೇಳಿದೆ ಅಷ್ಟೇ! ಮತ್ತ ನಾನು ಹಿಂದೆ ತಿರುಗಿ ದುರುಗುಟ್ಟಿದೆ (ಯಾರ್‍ಯಾಗೆ ಹಿಡಿದಿತ್ತು ಆ ನನ್ನ ವ್ಯಂಗ್ಯ ನೋಟ?)

ಇಷ್ಟು ಹೊತ್ತಿಗೆ ಜಾನಿ 'ಐ ವಾಂಟ್ ಪೆಪ್ಸಿ, ರೈಟ್ ನೌ, ಈಗಲೇ' ಅಂದ ಪೆಪ್ಸಿನಾ, ಮರೀ. ಈಗ್ಲೇನೇನಾ? ನೀನೂ ಬರ್‍ತೀಯಾ? ಕ್ಯಾಂಟೀನ್ ಕಡೆ ಹೋಗ್ಬರೋಣ? ಎಂದರು ಪಿತಾಶ್ರೀ ಮಗನ ಆಜ್ಞೆಯನ್ನು ಶಿರಸಾವಹಿಸಿ ಅವರಿಬ್ಬರೂ ತೆರಳಿದ್ದರಿಂದ 50% ತಲೆನೋವು ಕಡಿಮೆ ಆಯ್ತಲ್ಲಾ ಅಂತ ಸಮಾಧಾನ ಪಟ್ಕೊಂಡೆ. ಈಗ ಮಕ್ಕೀ ಉವಾಚ: 'ಮಾ ಏ ಆ್ಯಕ್ಟರ್ಸ್ ಮೇಕಪ್ ನಹೀ ಡಾಲೆ ಲಗ್ತೇ ಹೈ, ಅಲ್ಲಾ?' ಅವಳ ಮೇಕಪ್ ಯಾವ ಚಿತ್ರ ನಟಿಯನ್ನೂ ನಾಚಿಕೆ ಪಡಿಸುವಂತಿತ್ತು. ಅದು ಬೇರೆ ಮಾತು ಬಿಡಿ. ತಾಯಿಯ ಸರದಿ: 'ಹಾಂ ಬೇಟಾ, ಅಮೇಚುರ್ಸ್ ಅಲ್ವಾ, ಇಸ್ಲಿಯೇ ಹಾಗನ್ನಿಸಿರಬೇಕು ನಿನಗೆ'

'ಅದನ್ನೇ ಪೂರ್ತಿ ಕನ್ನಡದಲ್ಲಿ ಹೇಳಬಾರದೇ?' ಅಷ್ಟರಲ್ಲೇ ಮಗನ ಆಸೆ ಈಡೇರಿಸಿ ವಾಪಸ್ಸಾದ ತಂದೆಯ ಮಾತು!


'ಅಯ್ಯೋ ಇಷ್ಟು ಬೇಗ ಬರಬೇಕಾ ಈತ' ಅಂತ ನನ್ನ ಅರಣ್ಯ ರೋದನ. ಜಾನಿಗೆ ತಿನ್ನೋದು ಬಿಟ್ರೆ ಬೇರೆ ಯಾವುದರಲ್ಲೂ ಆಸಕ್ತಿ ಇರಲಿಲ್ಲವಾದ್ದರಿಂದ ಅವನ ಚಪಲ, ಚಪ್ಪರಿಸೋದು ಸಶಬ್ದವಾಗಿ ತಿನ್ನೋದು ಬಿಟ್ರೆ ಅಷ್ಟಿಷ್ಟು ಪೀಡ್ಸೋದು ಬಿಟ್ರೆ ಆವನು o.k. ಅಥವಾ ನಾನು ಇಷ್ಟು ಗಲಾಟೆಗೆ ಬೇಗನೇ ಹೊಂದ್ಕೊಂಡುಬಿಟ್ಟೆನೇನೋ. ಅಲ್ಲದೆ, ಅವನಿಗೆ ಹೆಚ್ಚು ಕಾಡಿಸಿದ್ರೆ ಮನೆಗೆ ಹೋಗ್ತಾ ರಸಗುಲ್ಲಾ ಕೊಡ್ಸೊಲ್ಲ ಅಂತ ತಂದೆ ಹೇಳಿದ್ದರೂ ಕೂಡ. ಅದರ ಆಸೆಗಾದ್ರೂ ಬಾಯ್ಮುಚ್ಕೊಂಡಿದ್ದ ಅಷ್ಟಿಷ್ಟಾದ್ರೂ.

ಮಕ್ಕೀದು ಇನ್ನೊಂದು ತರಹ. ಭಾಷಣ ನಡೀತಿದ್ದಾಗ 'ಈ ಭಾಷಣ್-ವಾಷಣ್ ಯಾವಾಗ ಖತಂ ಆಗತ್ತೆ? ಕಂ ಸೆ ಕ್ಂ ಈವತು ನಾಟಕಾ - ವಾಟಕ್ ನೋಡ್ತೀವಾ, ಯಾ ಕ್ಯಾ ಹಾಲ್ ಹೈ? ಅಂತಿದ್ದು ಮೊದಲು. ಆಮೇಲೆ ಆ ನಾಟಕದ ಪ್ರತಿ ಮಾತಿಗೂ ವಿಮರ್ಶೆ ಮಾಡುತ್ತಿದ್ದಳು! 'ಈ ಹಿರೋಯಿನ್ ಶರ್ಟ್ ಶೆಲ್ವಾರ್ ಕ್ಯೋನಹೀ ಪೆಹ್ನೀ ಹೈ?' ಸ್ಯಾಡಿಯಿಂದ ಅವಳು ಕಾಂಪಾಲಿ ಲಡ್ಕೀ ಅಂದ್ಕೊಂಡೆ.

ಈಗ ಅವಳ ತಾಯಿಗೇ ತಡ್ಕೊಳ್ಳೋಕಾಗದೆ ದುರುಗುಟ್ಟಿ ಬಾಯ್ಮುಚ್ಚಿದಳು. ಮತ್ತೆ ಮಕ್ಕಿಯ ಅವಲಕ್ಕಿ ಕುಟ್ಟೋದು ನಡೆಯಿತು. 'ಮಾ, ಇದೇನು? ಲವ್-ಸೀನಾ? ಆರ್ಗ್ಯುಮೆಂಟ್ ತರಾ ನಡ್ಕೊಳ್ತಿದ್ದಾರೆ?'... ಮಾ ಹೀರೋಯಿನ್ ನೋಡೋಕೆ ಚಲ್ತಾ ಹೈ ಆದ್ರೂ ಮೇಕಪ್ ನಹೀ, ಫಿರ್ ಭೀ ಹೀರೋ ಕ್ಯೋ ಉಸ್ಕೆ ಪೀಚಾ ಕರ್ ರಹಾ ಹೈ'...

ಇದೇಲ್ಲಾ ಬೇರೆಯವರಿಗೆ ಕೇಳಿಸದಿರಲು ಈಗ ಆ ತಾಯಿ ಪ್ರತಿ ಡೈಲಾಗ್‌ನೂ ಹಿಂದಿಗೆ ಭಾಷಾಂತರಿಸಿ ಮಕ್ಕೀಗೆ ಕಥೆ ಅಷ್ಟಿಷ್ಟು ಅರ್ಥವಾಯಿತು. ಕೊನೆಯ ದೃಶ್ಯದಲ್ಲಿ ಭಾವ-ಮೈದುನಂದಿರು ಕಸಿನ್ಸ್ ಮದುವೆಗೆ ಒಪ್ಪಿಕೊಳ್ತಾರೆ. ಇದು ಗೊತ್ತಾದ ತಕ್ಷಣ ಮಕ್ಕೀ 'ಮಾ ಇದು ಏಕ್ ತರಹಕಿ ಇನ್ಸೆಸ್ಟ್' ಅಂತ ಘೋಷಿಸಿದಾಗ ತಂದೆ 'ಮುಚ್ಚೇ ಬಾಯಿ ತಲೆ ಹರಟೆ' ಅಂತ ಸೀದಾ ಘರ್ಜಿಸಿದರು. ಉತ್ತರವಾಗಿ 'ಹೋ' ಎಂದು ಮಕ್ಕಿಯ ಅಳು ಜನಗಣಮನವರೆಗೂ ನಡೆಯಿತು.

ನಮ್ಮಿಬ್ಬರಿಗೂ ಕಾಸಿಲ್ಲದೆ ಕಾಮಿಡಿಯಲ್ಲಿ ಟ್ರಾಜಿಡಿ ನೋಡಿದ ಅನುಭವ ತೆರೆ ಇಳಿಯುವ ಹೊತ್ತಿಗೆ!



"ಆಗುಲ್ಲ ಅಂದರೇನರ್ಥ ?"

ಇನ್ಸ್ಪೆಕ್ಟರ್ ಗಧಾ

(ಕೆ.ವಿ. ಐಯ್ಯರ್ ಅವರ "ಸಮುದ್ಯತಾ" ಸಂಕಲನದಿಂದ)

ಆರನೆಯ ಕಂತು

ಇಷ್ಟು ವೇಳೆಯಲ್ಲಿ - ಅಕಸ್ಮಾತ್ ದೊಡ್ಡಯ್ಯನೂ ಸಣ್ಣಪ್ಪನೂ ಕಾಡಿನ ದಾರಿಯಿಂದ ಗವಿಯೊಳಕ್ಕೆ ಬಂದರು. ಇನ್ಸ್ಪೆಕ್ಟರು ನನ್ನನ್ನು ಹಿಡಿದುಕೊಂಡು ಹೋದರೆಂಬ ಸುದ್ದಿ ಊರಿಗೆಲ್ಲ ಹರಡಿ, ಯಾರೋ ದೊಡ್ಡಯ್ಯನನ್ನು ಎಬ್ಬಿಸಿ ಹೇಳಿದರಂತೆ. ದೊಡ್ಡಯ್ಯ ತಕ್ಷಣ ಸಣ್ಣಪ್ಪನ ಮನೆಗೆ ಹೋಗಿ ಅವನನ್ನೂ ಎಬ್ಬಿಸಿಕೊಂಡು, ಈ ಸಮಾಚಾರವನ್ನು ನನ್ನ ತಂದೆಗೆ ತಿಳಿಸಲೋಸುಗ ಲಾಂದ್ರಗಳನ್ನು ಹಿಡಿದುಕೊಂಡು ಕಾಡಿನ ದಾರಿಯಲ್ಲಿ ಬಂದಿದ್ದರು. ಅಲ್ಲಿ ನನ್ನನ್ನೂ ಬಿದ್ದುಕೊಂಡಿರುವ ಕುದುರೆಯನ್ನೂ ಅದರ ಒಡೆಯನಾಗಿ ಅಲ್ಲಿಯೇ ಕುದುರೆಯಂತೆಯೇ ಪ್ರಜ್ಞಾಹೀನನಾಗಿ ಬಿದ್ದಿದ್ದ ಇನ್ಸ್ಪೆಕ್ಟರನ್ನೂ ಯಾರ ಅಥವಾ ಯಾವ ಬಂಧನಕ್ಕೂ ಒಳಪಡದೆ ಅಲ್ಲಿಯೆ ನಿಂತಿದ್ದ ನನ್ನನ್ನೂ ಕಂಡು ವಿಸ್ಮಯದಿಂದ ಮೂಕರಂತೆ ಆದರು. ನನ್ನ ತಂದೆಗಳು ಪ್ರಶ್ನಾರ್ಥಕ ಭಾವದ ಅವರ ಮುಖಗಳನ್ನು ಕಂಡು, 'ಅನಂತರ ತಿಳಿಸುತ್ತೇನೆ' ಎಂದು ಪಿಸುಮಾತಿನಲ್ಲಿ ಹೇಳಿ, ಒಡನೆ ಭಟ್ಟಿಯನ್ನು ಅಲ್ಲಿಂದ ಯಾವ ಶೇಷವೂ ಉಳಿಯದಂತೆ ಕಾಡಿಗೆ ಸಾಗಿಸಿಬಿಡಬೇಕೆಂದು ನಿರ್ಧರಿಸಿದರು. ಇದನ್ನೆಲ್ಲ ಇನ್ಸ್ಪೆಕ್ಟರಿಗೆ ಪ್ರಜ್ಞೆ ಬರುವುದರೊಳಗಾಗಿ ಮಾಡಿಯೆ ಬಿಡಬೇಕು ಎಂದು ಎಲ್ಲರೂ ಕೆಲಸಕ್ಕೆ ಕೈ ಹಾಕಿದೆವು. ಅರ್ಧ ಮುಕ್ಕಾಲು ಗಂಟೆಯೊಳಗಾಗಿ ಸ್ಟಿಲ್ಲನ್ನೂ ಅದಕ್ಕೆ ಸಂಬಂಧಪಟ್ಟ ಎಲ್ಲ ಸಾಮಾನುಗಳನ್ನೂ ಕಾಡಿನೊಳಗೆ ಒಂದು ಗುಪ್ತ ಸ್ಥಳಕ್ಕೆ ಸಾಗಿಸಿಬಿಟ್ಟೆವು. ಆ ಸಮಯದಲ್ಲಿ ನಮಗೆ ಒಬ್ಬೊಬ್ಬರಿಗೂ ಎರಡಾಳು ಬಲ ಬಂದಿತ್ತು. ವೇಗವೂ ಇಮ್ಮಡಿಸಿತ್ತು. ಆ ಗವಿಯೆಲ್ಲವನ್ನೂ ಚೊಕ್ಕಮಾಡಿ ಗುಡಿಸಿ ಸಾರಿಸಿ, ರಂಗವಲ್ಲಿಯಿಟ್ಟು, ಭಟ್ಟಿ ಹೆಂಡ ಇದ್ದ ಜಗಲಿಯ ಮೇಲೆ ಒಂದು ಜಮಖಾನೆಯನ್ನು ಹಾಸಿ, ಶ್ರೀರಾಮ ದೇವರ ಪಟವನ್ನಿಟ್ಟು ಹೂವಿನ ಹಾರಗಳನ್ನು ಹಾಕಿ, ದೀಪದ ಸೊಡರುಗಳನ್ನು ಹಚ್ಚಿಟ್ಟು, ಅಮೃತಾರಿಷ್ಟದ ಗಂಧ ಸ್ವಲ್ಪವೂ ಉಳಿಯದಂತೆ ಒಳ್ಳೆಯ ಸಾಂಬ್ರಾಣಿ ಹಾಲುಮಡ್ಡಿಗಳ ಧೂಪ ಹಾಕಿ, ಏಕನಾದವನ್ನು ಬಳಿಯೆ ಇಟ್ಟುಕೊಂಡು, ಭಟ್ಟಿಯನ್ನು ಶುದ್ಧವಾದ ಭಜನೆಮಂದಿರವನ್ನಾಗಿ ಮಾಡಿಬಿಟ್ಟೆವು. ನಿಜವಾಗಿಯೂ ಪ್ರತಿ ಶನಿವಾರ ನಮ್ಮ ಭಟ್ಟಿಯಲ್ಲಿ ಭಜನೆ ನಡೆಸುತ್ತಿದ್ದೆವು. ಅಂದ ಹಾಗೆ ಆ ದಿನ ಶನಿವಾರವೂ ಹೌದು.

ಇಷ್ಟೂ ಮಾಡಿದ ಮೇಲೆ, ಇನ್ಸ್ಪೆಕ್ಟರ ನೆತ್ತಿಗೆ ಮುಖಕ್ಕೆ ತಣ್ಣೀರು ಎರಚಿ, ತಟ್ಟಿ, ಕೈಕಾಲ್ಗಳನ್ನು ಉಜ್ಜಿ ಚೇತನಗೊಳಿಸಿದೆವು. ಒದೆತ ತಿಂದಿದ್ದ ಅವರ ಹಣೆಯ ನೋವು ಆಗ ಅವರಿಗೆ ತಿಳಿಯಿತು. 'ಅಯ್ಯೋ' ಎಂದುಕೊಳ್ಳುತ್ತಾ ನಾಲ್ಕಾರು ಬಾರಿ ಹಣೆಯನ್ನು ಮುಟ್ಟಿ ನೋಡಿಕೊಂಡರು. 'ಗಧಾ' ಒದೆದುದೆಂದು ಆಗ ಅವರ ಜ್ಞಾಪಕಕ್ಕೆ ಬಂದಿತು. ರೆಗ್ಯುಲೇಷನ್ ರುಮಾಲು ಅಂದು ತಲೆಗೆ ಗಟ್ಟಿಯಾಗಿ ಕಟ್ಟಿಕೊಂಡಿದ್ದುದರಿಂದ ಅವರ ಬುರುಡೆ ಬಚಾವ್ ಆಯಿತು.

ಇನ್ಸ್‌ಪೆಕ್ಟರಿಗೆ ಸ್ವಲ್ಪ ಸ್ವಲ್ಪವಾಗಿ ಎಚ್ಚರವಾಯಿತು. ಜ್ಞಾಪಕವೂ ಬಂತು. ಅವರಿಗೆ ಎಚ್ಚರವಾದಾಗ ನನ್ನ ತಂದೆ, ಚಿಕ್ಕಪ್ಪ ಇಬ್ಬರೂ ಭಜನೆ ಮಾಡುತ್ತ ಕುಳಿತಿದ್ದರು. ಲಂಬಾಣಿಗಳ ಮಿಶ್ರಿತ ಭಾಷೆಯಲ್ಲಿ ಶ್ರೀರಾಮನ ಮೇಲೆ ಪದ ಹೇಳುತ್ತಿದ್ದರು. ನಾನು ಆಗ, ನನ್ನ ಷರಟಿನ ಮುಂಭಾಗದ ಬಟ್ಟೆಯನ್ನು ಚರ್ರನೆ ಹರಿದು, ತಣ್ಣೀರಿನಲ್ಲಿ ನೆನಸಿ, ಇನ್ಸ್‌ಪೆಕ್ಟರ ನೆತ್ತಿಗೆ ಒತ್ತುತ್ತಿದ್ದೆ. ಅದನ್ನು ಅವರು ಥಟ್ಟನೆ ನನ್ನ ಕೈಯಿಂದ ಕಿತ್ತುಕೊಂಡು ತಮ್ಮ ನೆತ್ತಿಗೆ... ಹಣೆಗೆ... ತಾವೇ ಒತ್ತಿಕೊಂಡರು. ನನ್ನ ತಂದೆಗಳು ಎದ್ದು ಒಂದು ತೆಂಗಿನಕಾಯನ್ನು ತೆಗೆದುಕೊಂಡು ಬಂದು, ಇನ್ಸ್‌ಪೆಕ್ಟರಿಗೆ ಮೂರು ಸೂಳು ನಿವಾಳಿಸಿ, ಅದನ್ನು ದೇವರ ಪಠದ ಮುಂದೆ ಇಡಿಗಾಯಿ ಒಡೆದರು.

ಇನ್ಸ್‌ಪೆಕ್ಟರು ''ಅದೇನು? ಏಕೆ?'' ಎಂದು ಪ್ರಶ್ನಿಸಿದರು.

ನನ್ನ ತಂದೆ ಲಂಬಾಣಿಗರ, ಹಕ್ಕಿಬಿಕ್ಕಿ ಜಾತಿಯವರ ಸ್ವಲ್ಪ ಕನ್ನಡ ಮಿಶ್ರಣ ಭಾಷೆಯಲ್ಲಿ ''ಮಂತ್ರ, ಮಾಟ, ಭೂತ, ಪಿಚಾಚಿ, ಪೀಡೆ, ಪ್ರಾರಬ್ಧ ಎಲ್ಲ ಕಳೆದೋಯ್ತು'' ಎಂದರು.

ಇನ್ಸ್‌ಪೆಕ್ಟರ್: ನೀವೇ ಇದ್ದೀರಲ್ಲೊ? ಎಲ್ಲಿ ಕಳೆದ್ಹೋಯ್ತೊ? ಇದೆಲ್ಲ ಈ ಪೂಜೆ, ಏನೊ ಸೋಗು? ಕಳ್ಳ ಸೂ... ಮಕ್ಕಳಿರಾ, ಯಾರೊ ನೀವು?

ನನ್ನ ತಂದೆ: (ಮಿಶ್ರಣ ಭಾಷೆಯಲ್ಲಿ) ನಾವು ಯಕ್ಸರು ದ್ಯಾವ್ರೆ! ದ್ಯಾವ್ರ ಪೂಜೆ ಮಾಡ್ತಿದ್ದೀವಿ.

ಇನ್ಸ್‌ಪೆಕ್ಟರ್: ಯಕ್ಷರು ಅಂದರೆ?

ನನ್ನ ತಂದೆ: ನಾವು ಗಂಧರ್ವರ ಅಂಸ. ನಾವು ಈ ಬೆಟ್ಟಕ್ಕೆ ಒಡೇರು. ಇಲ್ಲೆ ಇರೋರು.

ಇನ್ಸ್‌ಪೆಕ್ಟರ್: ನಿಮ್ಮಂಥವರು ಎಷ್ಟು ಜನರಿರುತ್ತಾರೆ ಇಲ್ಲಿ?

ನನ್ನ ತಂದೆ: ಬೋ ಯಕ್ಸರು ಇದ್ದಾರೆ.

ಇನ್ಸ್‌ಪೆಕ್ಟರ್: ಹೆಂಗಸರು, ಗಂಡಸರು, ಮಕ್ಕಳು, ಎಲ್ಲರೂ ಇಂತಾ ಗವಿಗಳಲ್ಲಿ, ಬಂಡೆ ಸೀಳುಗಳಲ್ಲಿ, ವಾಸ ಮಾಡುತ್ತಿರುತ್ತೀರೊ?

ನನ್ನ ತಂದೆ: ನಮ್ಮಲ್ಲಿ ಎಣ್ಣು ಸಂತಾನಕ್ಕೆ ಸಾಪ ಇದೆ. ಕಟ್ಟಿಕೊಂಡ ಮನೇಲೂ ಇರೋದಕ್ಕೆ ಸಾಪ ಇದೆ.

ಇನ್ಸ್‌ಪೆಕ್ಟರ್: ಮತ್ತೆ ನಿಮ್ಮ ಸಂತತಿ ಹೇಗೆ ಬೆಳೆಯುತ್ತೊ?

ನನ್ನ ತಂದೆ: ಒಂದೊಂದು ವಂಸಕ್ಕೆ ಒಬ್ಬ, ಮನ್ಸರ ಎಣ್ಣನ್ನ ಕೂಡ್ಕೆ ಮಾಡ್ಕೊಂಡಿರಬೌದು.

ಇನ್ಸ್‌ಪೆಕ್ಟರ್: ಊರಲ್ಲಿರೋ ಹೆಣ್ಣುಮಕ್ಕಳನ್ನ ಹೊತ್ತುಕೊಂಡು ಬಂದುಬಿಡುತ್ತೀರಲ್ಲವೆ? ನಾವು ಮನುಷ್ಯರು... ನೀವು ಗಂಧರ್ವರು, ದೇವತೆಗಳು.

ನನ್ನ ತಂದೆ: ನಾವು ಯಕ್ಸರು.

ಇನ್ಸ್‌ಪೆಕ್ಟರ್: ಹೂಂ, ನೀವು ಯಕ್ಷರು... ನಾವು ರಾಕ್ಷಸರು, ಪಿಶಾಚರು... ನೀವು ಜೀವನ ಹೇಗೆ ನಡೆಸುತ್ತೀರೊ? ನಿಮ್ಮನ್ನೆಲ್ಲ ಬೇಟೆಯಾಡಿ, ಜೈಲುಗಳಲ್ಲಿ ತುಂಬಿಬಿಡುತ್ತೇನೆ.

ನನ್ನ ತಂದೆ: ಈ ಕೋಟೇಲಿ ಬೇಸಾಯ ಮಾಡ್ಕೋತೇವೆ. ಕಾಡಿನಲ್ಲಿ ಕಡ್ಡಿ ಪುಳ್ಳೆ ಆರ್‍ಸಿ, ಕಟ್ಕೊಂಡ್ಹೋಗಿ ಊರಲ್ಲಿ ಮಾರ್‍ತೀವಿ. ಜೇನು, ಔಷಧಿ, ಚಕ್ಕೆ, ಎಲೆ, ಬೇರು ಇದನ್ನೂ ಮಾರ್‍ತೇವೆ. ಪಕ್ಕಿ, ಮೊಲ, ಹಂದಿ, ಜಿಂಕೆ ಇವುಗಳ್ನ ಬೇಟೆಯಾಡ್ತೇವೆ.

ಇನ್ಸ್‌ಪೆಕ್ಟರ್: ನಾ ಬಲ್ಲೆ - ನಾ ಬಲ್ಲೆ... ರಾತ್ರಿವೇಳೆ ಊರಲ್ಲಿ ಬಂದು ಕದಿಯೋದು. ಒಂಟಿಯಾಗಿ ಹೆಣ್ಣುಮಕ್ಕಳು ಸಿಕ್ಕಿದ್ರೆ ಹೊಡ್ಕೊಂಡ್ಹೋಗಿಬಿಡೋದು. ಹಗಲು ಹೊತ್ತು ಗವಿಗಳಲ್ಲೊ, ಹಾಳುಬಿದ್ದ ಮಂಟಪದೊಳಗೊ ಸೇರ್‍ಕೊಳ್ಳೋದು. ನಿಮ್ಮ ಭಜನೆ ಒಂದು ಸೋಗು. ನೀವೆಲ್ಲ ಕಳ್ಳಭಟ್ಟಿ ಇಳಿಸೋರು. ನಿಮ್ಮನ್ನೆಲ್ಲ ಹಿಡಿದು ಜೈಲಿಗೆ ಹಾಕಿಸ್ತೇನೆ.

ನನ್ನ ತಂದೆ: ಅಂಗೇ ಮಾಡ್ಬಿಡಿ ದೇವ್ರ. ಈಚ್ಗಂತೂ ನಮ್ಗೆ ಜೀವ್ನ ಬೋ ಕಸ್ಟ ಆಗೋಗ್ಯೆತೆ. ಕೆಲ್ಸ ಮಾಡ್ಸಿಕೊಳ್ಳಿ, ಅನ್ನ ಬಟ್ಟೆ ಕೊಡ್ಸಿಬಿಡಿ ದ್ಯಾವ್ರಾ.

ಇನ್ಸ್‌ಪೆಕ್ಟರ್: ಬಲು ತಲಹರಟೆ ಮಾತನಾಡುತ್ತಿದ್ದೀಯೆ. ನಿನ್ನ ಮೈಗೆ ಅದು ಒಳ್ಳೇದಲ್ಲ. ಇದ್ಯಾರ್‍ದೊ... ಈ ಕುದ್ರೆ?

ನನ್ನ ತಂದೆ: ನಾವೇನು ಬಲ್ವಿ ದ್ಯಾವ್ರಾ! ಯಾವನೋ ಊರಿನೋನೇ ಇರ್‍ಬೇಕು. ಈವೊತ್ತು ನೇಸರು ಮುಣುಗುತಿರೋವಾಗ, ಈ ಬೆಟ್ಟಕ್ಬಂದು, ನಾವ್ ಬೆಳ್ಕೊಂಡಿದ್ದ ಕಡ್ಲೆ ಗಿಡಗಳ್ನೆಲ್ಲ ಮೇಯುಸ್ತಿದ್ದ. ಅಟ್ಟಿಸ್ಕೊಂಡೋಗಿ ಇಡ್ದು ಶೆಂದಾಗಿ ತದಕಿದ್ವಿ. ಆದ್ರೇನೂ ಬಿಡಿಸ್ಕೊಂಡು ಓಡೇ ಓದ. ನಾವು ಅವನ್ತಂದಿದ್ದ ಈ ಕುದ್ರೇನ ಇಲ್ಲಿ ಕಟ್ಟಿ ಆಕ್ಕೊಂಡ್ವಿ. ನಾಳೆ ಬಂದೇ ಬತ್ತಾನೆ. ಏನಾರ ಅಣ ಕೊಟ್ಟು ಕುದ್ರೆ ಬಿಡಿಸ್ಕೊಂಡೋಗಾಕೆ. ಕುದ್ರೇನ ಯಾಕೆ ಕಳ್ಕೊಂಡಾನು ಅವನು! ಬರೇ ಕೈಯಾಗೆ ಬಂದ್ರೆ, ಇಡ್ಕೊಂಡ್ಬಂದು ಒಪ್ಪಿಸಿಬಿಡ್ತೀವಿ... ತಮ್ಮತ್ರ ಕುದ್ರೇನೂ ಅವನ್ನೂ ನಾಳೆ...

ಇನ್ಸ್‌ಪೆಕ್ಟರ್: ಕುದುರೆ ನನ್ನದು.

ನನ್ನ ತಂದೆ: ಔದಾ ದ್ಯಾವ್ರೇ! (ನನ್ನ ಚಿಕ್ಕಪ್ಪನ ಕಡೆ ತಿರುಗಿ) ನೋಡ್ದ್ಯಾ ತಮ್ಮಯ್ಯ. ಅಂಗಾರೆ ಬುದ್ದಿ, ಅವನು ಕಳ್ಳ... ಇಡ್ದು ಸಿಕ್ಸೆ ಮಾಡ್ಲೇಬೇಕು.

ಇನ್ಸ್‌ಪೆಕ್ಟರ್: (ನನ್ನನ್ನು ತೋರಿಸುತ್ತ) ಕದ್ದು ತಂದೋನು ಇವನೇ ಅಲ್ಲವೆ?

ನನ್ನ ತಂದೆ: (ಅರೆಕ್ಷಣ ನನ್ನ ಮುಖವನ್ನು ನೋಡಿ) ಛೆ! ಇವರು ಯಾಕಾದಾರು ದ್ಯಾವ್ರೆ! ಆ ಬಡ್ಡಿಮಗನಿಗೆ ಒಂದು ಕಣ್ಣಲ್ಲಿ ಕಜ್ಜುಗ ಬೆಳ್ಕೊಂಡಿತ್ತು. ತಲೇಲಿ ಸ್ವಲ್ಪ ಸ್ವಲ್ಪ ನೆರೆ ಬಂದಿತ್ತು. ಇನ್ನೂ ಎತ್ತರ ಇದ್ದ... ಇವರು... ದ್ಯಾವ್ರೆ... ನಿಮ್ಜೊತೇಗೆ ಬಂದವರು ಅಲ್ಲವಾ?

ಇನ್ಸ್‌ಪೆಕ್ಟರ್: ಏ... ಏ... ಬದ್ಮಾಷ್ - ಕುದುರೆ ಗವಾಕ್ಷದಿಂದ ಏಣಿಮೇಲೆ ಇಳಿದು ಬಂತೇನೊ ಇಲ್ಲಿಗೆ?

ನನ್ನ ತಂದೆ: ಅದು ಯಂಗಾರ ಬಂದಾತು ದ್ಯಾವ್ರಾ! ಕಾಡಿನ ದಾರಿ ಒಂದ್ಯೆತೆ ಇಲ್ಲಿಗೆ. ಅಲ್ಲಿಂದ ನಡಸ್ಕೊಂಡು ಬಂದ್ವಿ.'

ಇನ್ಸ್‌ಪೆಕ್ಟರ್: ಇದ್ಯಾಕೊ ಕುದುರೆ ಹೀಗೆ ಬಿದ್ಕೊಂಡಿದೆ? ಬಲೆ ಕಳ್ರು ನೀವು. ಈ ಗವೀಲಿ ಸೇರ್ಕೊಂಡು ಕಳ್ಳತನ ಮಾಡ್ತಿದ್ದೀರಿ. ಕಳ್ಳ ಸಾರಾಯಿ ಭಟ್ಟಿ ಇಳಿಸ್ತಿದ್ದೀರಿ. ಹುಷಾರು, ಯಾರಾದರೂ ಕದಲಿಮೆದಲಿದರೆ ತಲೆ ಎಗರಿಸಿಯೇಬಿಡುತ್ತೇನೆ. (ಎನ್ನುತ್ತ ರಿವಾಲ್ವರನ್ನು ಹಿಡಿದು ತೋರಿಸಿ) ಕೇಳಿದ್ದಕ್ಕೆಲ್ಲಾ ಬೊಂಕುತಾ ಇದ್ದೀರಾ?

ನನ್ನ ತಂದೆ: ಕಳ್ಳಬಟ್ಟಿ! ಅದ್ಯಾಕಾರ ಮಾಡೇವು ದೇವ್ರಾ? ಯೆಂಡ, ಷರಾಬು ನಮ್ಮ ಕುಲದಾಗ ಕೂಡದು. ಮನಸ್ರೇ ಆ ಕಸಬೆಲ್ಲ ಮಾಡೋರು.

ಇನ್ಸ್‌ಪೆಕ್ಟರ್: ಅಂದ್ರೆ ನೀವು ಮನುಷ್ಯರಲ್ಲ, ಯಕ್ಷರು, ದೇವತೆಗಳು. ಸೋಮಪಾನ ಮಾತ್ರ ಮಾಡ್ತೀರೇನೊ? ಕ...ಬಡ್ಡಿ... ಮಕ್ಳ, ಕುದ್ರೆ ಯಾಕ್ರೊ ಹೀಗೆ ಬಿದ್ಕೊಂಡಿದೆ?

ನನ್ನ ತಂದೆ: ಬೋ ಗದ್ಲ ಮಾಡ್ತಿತ್ತು ದ್ಯಾವ್ರಾ. ನಾಕು ಉಮ್ಮತ್ತಿಕಾಯಿ ಬೀಜಾನ ಬೆಲ್ಲದೊಳಗಿಟ್ಟು ತಿನ್ನಿಸ್ದೆ. ಮತ್ತು ಬಂದು ಮನೀಕೊಂಡೈತೆ... ತಲೆಗೆ ತುಂಬ ಪೆಟ್ಟಾಯ್ತಾ ದ್ಯಾವ್ರೆ? ತಮ್ಮ ಕೈಲಿ ನಡ್ಯೋಕಾಗೊ ಅಂಗಿದ್ರೆ, ಲಾಟೀನ್ ಅಚ್ಕೊಡ್ತೀವಿ, ದಾರಿ ತೋರ್‍ತೇವೆ, ಓಗ್ತೀರಾ ದ್ಯಾವ್ರೆ, ಅವಯ್ಯನ್ನ ಕರ್‍ಕೊಂಡು. ಕುದ್ರೆ ಕದ್ದೋನು ಆ ಒಕ್ಕಣ್ಣ ಊರಿನೋನೇ ಇರಬೇಕು ದ್ಯಾವ್ರೆ. ಅವನು ಬರಲಿ, ಬರ್‍ದೇ ಇರಲಿ... ಸಿಕ್ಲಿ ಸಿಕ್ಕದೇ ಇರ್‍ಲಿ ನಾಳೆ ಬೆಳಗ್ಗೆ ತಮ್ಮ ಕುದ್ರೇನ ತಂದೊಪ್ಪಿಸಿಬಿಡ್ತೀವಿ. ಅವ್ನಗಾನ ಬಂದರೆ, ಅವನ್ನೂ ತಂದೊಪ್ಪಿಸಿಬಿಡ್ತೀವಿ. ಇಲ್ದಿದ್ರೆ ಪತ್ತೆ ಮಾಡ್ಲಿ ದ್ಯಾವ್ರೆ. ಕಣ್ಣಲ್ಲಿ ಗಜುಗ ಬೆಳದೈತೆ, ಉದ್ದನೆ ಆಳು. ಬಾಯಾಗ ಮುಂದಿನ ಅಲ್ಲುಗಳು ಎರಡೂ ಇಲ್ಲ, ಒಳ್ಳೇ ಮಡಿ ಉಟ್ಕೊಂಡಿದ್ದ ದ್ಯಾವ್ರೆ. ಅಗಸ್ರೋನೇ ಇರ್‍ಬೇಕು.

ಇನ್ಸ್‌ಪೆಕ್ಟರ್: ಏ ಬದ್ಮಾಷ್... ಎಷ್ಟೆಲ್ಲಾ ಮಾತಾಡ್ತೀಯೊ ನೀನು? ಈ ಗವಾಕ್ಷ ಯಾಕೊ? ಅಲ್ಲಿ ಏಣಿ ಯಾಕೊ?

ನನ್ನ ತಂದೆ: ಗಾಳಿ ಬೆಳಕೂ ಬರ್‍ಲೀಂತ. ಏಣಿ, ಮಳೆ ಬಂತೂಂದ್ರೆ ಅತ್ತಿ ಮುಚ್ಚೋಕೆ.

★★★

ಇನ್ಸ್‌ಪೆಕ್ಟರು ನನ್ನ ಕೈಯಿಂದಲೆ ತಮ್ಮ ತಂದೆಗಳ, ಚಿಕ್ಕಪ್ಪನ ಕೈಗಳನ್ನು ಹಗ್ಗದಿಂದ ಬಂಧಿಸುವಂತೆ ಆಜ್ಞೆ ಮಾಡಿದರು. ವ...ರ...ದ...ಪ್ಪ, ಮಾಡಬಾರದ ಕೆಲಸವನ್ನು ನನ್ನ ಕೈಯಿಂದ ಮಾಡಿಸಿದರು. ಕುದುರೆಯನ್ನು ಅಲ್ಲಿಯೆ ಬಿಟ್ಟು, ಅವರಿಗೆ ಕಟ್ಟಿದ್ದ ಹಗ್ಗವನ್ನು ಹಿಡಿದುಕೊಳ್ಳುವಂತೆ ನನಗೆ ಹೇಳಿ, ಇನ್ಸ್‌ಪೆಕ್ಟರು ಒಂದು ಕೈಲಿ ರಿವಾಲ್ವರು, ಇನ್ನೊಂದು ಕೈಲಿ ಟಾರ್ಚ್ ಬೆಳಕನ್ನು ಹಿಡಿದುಕೊಂಡು, ನನ್ನ ತಂದೆ ನನ್ನ ಚಿಕ್ಕಪ್ಪನಿಗೆ ಅವರವರ ಕಂಬಳಿ ಜಮಖಾನೆಗಳನ್ನು ಹೊರುವಂತೆ ಹೇಳಿ... ಗವಿಯನ್ನು ಬಿಟ್ಟು ಕಾಡುದಾರಿ ಹಿಡಿದು ಬಂಗಲೆಯನ್ನು ತಲುಪಿದಾಗ, ಬೆಳಗಿನ ಝಾವ ಎರಡು ಗಂಟೆಯಾಗಿತ್ತು. ಪ್ಯಾದೆಗಳನ್ನು ಕರೆದು ನನ್ನ ತಂದೆ, ಚಿಕ್ಕಪ್ಪನವರನ್ನು ಬಂಧನದಲ್ಲಿಟ್ಟು, ನನ್ನನ್ನು ಮನೆಗೆ ಹೋಗುವಂತೆ ಹೇಳಿದರು. ಕಾರಣ, ನನ್ನ ಮೇಲೆ ಏನೂ ಎವಿಡೆನ್ಸ್ ಅವರಿಗೆ ಸಿಗಲೇ ಇಲ್ಲ... ನನ್ನನ್ನು ಕಳಿಸಿಕೊಡುವಾಗ ಸಮನ್ಸ್ ಜಾರಿ ಮಾಡಿದಾಗ ಆ ತಾರೀಖಿಗೆ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಹಾಜರಾಗಬೇಕು ನೀವು - ಅಂದ, ನೀನೂ ಎನ್ನಲಿಲ್ಲ ವರದಪ್ಪ. ನನ್ನಿಂದ ನನ್ನ ತಂದೆಗಳಿಗೆ, ಚಿಕ್ಕಪ್ಪನಿಗೆ ಈ ವಿಪತ್ತು ಬಂದೊದಗಿತ್ತು.

(ಮುಂದುವರಿಯುವುದು)

ಶಿಶು ಪದ್ಯಗಳು (ದೊಡ್ಡವರಿಗೆ)

- ಎಚ್. ಗೋಪಾಲಕೃಷ್ಣ

ಆಕಾಶದಲ್ಲಿ ಮಳೆ
ಭೂಮಿಯಲ್ಲಿ ಬೇಳೆ
ಜೇಬಿನಲ್ಲಿ ರೊಕ್ಕ
ಮನಸಿನಲ್ಲಿ ಲೆಕ್ಕ!

ಬಾನಿನ ತುಂಬಾ ನಕ್ಷತ್ರದ ಚುಕ್ಕೆ
ಇಳೆಯ ತುಂಬಾ ಬಿದಿರ ಕುಕ್ಕೆ
ಪಕ್ಕದಾಕೆಯ ಹೊಸ ಸೀರೆ ನನ್ನಾಕೆಯ ಕಣ್ಣು ಕುಕ್ಕೆ
ನನ್ನ ತಲೆಯ ಮೇಲೇಕೆ ಏಳಬೇಕು ಬೊಕ್ಕೆ

ಅಂಗೈಯಲಿ ನೆಲ್ಲಿಕಾಯಿ
ಹೊಟ್ಟೆನ ಶಿರಕೆ ಸೀಗೇಕಾಯಿ
ಚಳಿಗಾಲಕೆ ಅವರೆಕಾಯಿ
ಪರೀಕ್ಷೆಯಲ್ಲಿ ಕುಂಬಳಕಾಯಿ!

ದೇವರ ಗೂಡಿನಲ್ಲಿ ಒಂದು ದೇವರು
ಅಂಗಳದಲಿ ಮಾವಿನ ಬೇರು
ರಸ್ತೆಯಲಿ ಹೊರಟಿದೆ ತೇರು
ಎಳೆಯುತಾರೆ ದಡ್ಡರು ಹರಿಸಿ ಬೆವರು

ಪಾಂಚಾಲಿಗೆ ಗಂಡರು ಐವರು
ಪುಢಾರಿಗಳಿಗೆ ಪಾರ್ಟಿಗಳು ನೂರು
ಮತದಾತರಿಗೆ ಆಶ್ವಾಸನೆಗಳು ಸಾವಿರಾರು
ಗೆದ್ದ ನಂತರ ಪಂಗನಾಮ ಬರೇ ಮೂರು

ಹನುಮನುದಿಸಿದ ನಾಡು
ಆದರಿಂದಲೇ ಪುಢಾರಿಗಳು ಹನುಮನ ಹಾಗೆ
ಅತ್ತಿಂದಿತ್ತ ಇತ್ತಿಂದತ್ತ
ಹಾರುವರು ಹಿಡಿದು ಹನುಮನ ಜಾಡು

ಮಾಯಾ ಬಡಾವಣೆ

– ಬಾಗೂರು ಚಂದ್ರು

'ಸರ್ಕಾರ: ಸುತ್ತಲೂ ಲತ್ತೆ ಕೊಡುವ ಕತ್ತೆ' - ಶಿವರಾಮ ಕಾರಂತ

ಭಾನುವಾರ ಬೆಳಗಿನ ನಾಷ್ಟಾ ಮುಗಿದ ನಂತರದ ಸಮಯ. ನನ್ನ ಮುಖದ ಮುಂದೊಂದು ನನ್ನ ಹೆಂಡತಿಯ ಮುಖದ ಮುಂದೊಂದು ಅಂದಿನ ದಿನಪತ್ರಿಕೆ. ಮಗನ ಬೆರಳುಗಳು ಕಂಪ್ಯೂಟರ್ ಮೇಲೆ; ಮಗಳ ಕಿವಿಯಲ್ಲಿ ಮೊಬೈಲ್. ಅಲ್ಲಿ ಯಾರಾದರೂ ಫೋಟೋಗ್ರಾಫರ್ ಇದ್ದಿದ್ದರೆ ಮಾಧ್ಯಮ ಯುಗದ ಮಾಡಲ್ ಕುಟುಂಬ ಶೀರ್ಷಿಕೆ ಕೊಡಬಹುದಾಗಿದ್ದ ಸುಂದರ ಚಿತ್ರ ಸಿಗುತ್ತಿತ್ತೇನೋ.

ಎಷ್ಟೋ ಸಮಯದಿಂದಿದ್ದ ಮೌನ ಮುರಿದ ಪತ್ನಿಯ ದಿಢೀರ್ ಪ್ರಶ್ನೆ: 'ಕುಮಾರ ಸೈಟ್ ಎಲ್ಲಿ ಬಚ್ಚಿಡುತಾರೋ?'

ಮಗನ ಕ್ಯಾಷುಯಲ್ ಉತ್ತರ: 'ಇನ್ನೆಲ್ಲಿ ಬಚ್ಚಿಡುತಾರೆ. ಬ್ಯಾಂಕ್ ಲಾಕರಲ್ಲಿ.'

'ನಾನು ಕೇಳುತಿರೋದು ಒಂದು ಸೈಟಲ್ಲವೋ ತುಂಬಾ ಸೈಟುಗಳು'

'ನೀನು ದಿವಸ ಪೇಪರಲ್ಲಿ ಓದುಲ್ಲವೇನಮ್ಮ. ಟ್ಯಾಕ್ಸ್‌ನೋರು ರೇಡ್ ಮಾಡಿದಾಗ ಅದೆಷ್ಟೋ ಕೋಟಿ ಕ್ಯಾಷ್, ಇನ್ನೆಷ್ಟೋ ಕೋಟಿ ಡಿಪಾಸಿಟ್, ಆ ಊರಲ್ಲಿ ಆರು ಮನೆ, ಇನ್ನೊಂದು ಊರಲ್ಲಿ ಹದಿನಾರು ಸೈಟುಗಳ ಕಾಗದಪತ್ರ ಎಲ್ಲಾ ಬ್ಯಾಂಕ್ ಲಾಕರಿನಲ್ಲಿ ಸಿಗ್ತು ಅಂತ. ಇಂತ ಲಾಕರುಗಳಲ್ಲಿ ಎಷ್ಟು ಸೈಟುಗಳನ್ನು ಬೇಕಾದರೂ ಮುಚ್ಚಿಡಬಹುದು'. ಕುಮಾರನ ಖಡಾಖಂಡಿತ ಉತ್ತರ.

'ಅಯ್ಯೋ ನಾನೇನೊ ಕೇಳುತಿದೀನಿ ನೀನು ಏನೋ ಹೇಳುತಿದಿಯಲ್ಲೋ. ಇಲ್ಲಿ ಪೇಪರಲ್ಲಿ ಏನಿದೆ ಕೇಳು - ಒಂದು ಲಕ್ಷ ಸೈಟುಗಳ ಮೆಗಾ ಲೇಔಟ್ ಮಾಡುತಿದೀವಿ; ಆದರೆ ಅದು ಎಲ್ಲಿದೆ ಅನ್ನೋದನ್ನ ಬಚ್ಚಿಡುತೀವಿ; ಇದನ್ನು ಗುಟ್ಟಾಗಿಡಿ ಅನ್ನೋದು ದೊಡ್ಡೋರ ಆಜ್ಞೆ - ಎಂದು ಹಿರಿಯ ಅಧಿಕಾರಿಗಳು ಹೇಳಿದಾರೆ.'

ಸರ್ಕಾರದ ಖರ್ಚಿನಲ್ಲಿ ತೋಡಿದ ಇಡೀ ಬಾವಿ, ಎಷ್ಟೋ ಮೈಲಿ ರಸ್ತೆ ಮಟಾಮಾಯವಾಗಿದೆ ಅಂತಾ ಓದಿದ್ದೆ. ಇದು ಅದರ ಅಪೋಸಿಟ್. ಅಲ್ಲಿ ಕಟ್ಟೋವರೆಗೂ ಇದ್ದದ್ದು ಆಮೇಲೆ ಮಾಯ. ಇಲ್ಲಿ ಕಟ್ಟೋವಾಗ ಇಲ್ಲದ್ದು ಪ್ರಾರಂಭೋತ್ಸವದ ದಿನ ಪ್ರತ್ಯಕ್ಷ ಎಂದು ನಾನು ಅಂದುಕೊಳ್ಳುತ್ತಿರುವಾಗಲೇ ಈ ಆಫೀಸ್ ಜೊತೆಗಿನ ನನ್ನ ಅನುಭವ ಜ್ಞಾಪಕಕ್ಕೆ ಬಂದು ಹೇಳಿದೆ: 'ನಿಜ ಗುಟ್ಟಾಗಿಡೋದರಲ್ಲಿ ಅವರು ನಿಸ್ಸೀಮರು. ಎಷ್ಟೋ ತಿಂಗಳ ಹಿಂದೆ ಬ್ಯಾಂಕ್ ಸಾಲ

ಮಾಡಿ ಸೈಟಿಗೆ ಅಪ್ಲಿಕೇಷನ್ ಹಾಕಿದ್ದೆನಲ್ಲ; ಬಡ್ಡಿ ಸುಸ್ತಿ ಬಡ್ಡಿ ಅಂತ ನೋಟೀಸ್ ಬಂದಮೇಲೆ ಅದೇನಾಯಿತು ಅಂತ ವಿಚಾರಿಸೋಣ ಅಂತ ಹೋದರೆ ಅಲ್ಲಿದ್ದೋರೆಲ್ಲಾ ನನಗೆ ಗೊತ್ತಿಲ್ಲ ತನಗೆ ಗೊತ್ತಿಲ್ಲ ಅಂತ ತಾರಮ್ಮಯ್ಯ ಹಾಡಿದರು.'

'ಸರಿ ನೀವು ಕೆಲಸಕ್ಕೆ ಸೇರಿಕೊಂಡಾಗಿನಿಂದ ಸೈಟ್ ತೊಗೊಳಿ ಅಂತ ಹೇಳ್ತಾನೆ ಇದ್ದೆ. ಆಗ ಸುಮ್ಮನಿದ್ದಿರಿ ಈಗ ನೀವು ಕೇಳೋಕ್ಕೆ ಹೋದರೆ ನಿಮಗೆ ಕೊಡುಕ್ಕೆ ಅಲ್ಲಿ ಕಾಯ್ಕೊಂಡು ಕೂತಿರ್ತಾರೆ'. ಎಲ್ಲಾ ಗಂಡಂದಿರ ಮೇಲೆ ಎಲ್ಲಾ ಹೆಂಡತಿಯರಿಗಿರುವ ಜನರಲ್ ಕೋಪದ ಜೊತೆಗೆ ಮಕ್ಕಳ ಜೊತೆ ಗಹನ ಚಿಂತನೆ ನಡೆಸಲು ಸಿಕ್ಕಿರುವ ಅವಕಾಶಕ್ಕೆ ನಾನು ವಿಘ್ನ ತರುತ್ತಿದ್ದೇನೆ ಎನ್ನುವ ಸ್ಪೆಷಲ್ ಕೋಪದ ಸೂಚನೆ.

'ಅಲ್ಲ ಕಣಮ್ಮ, ಇಷ್ಟೊಂದು ಸೈಟುಗಳನ್ನು ಬಚ್ಚಿಡೋಕ್ಕಿಂತ ಹೀಗೆ ಮಾಡಿ ಎಂದು ಹೇಳಿರೋ ಕಾಗದ ಬಂದಿದೆ ಅನ್ನೋದನ್ನೇ ಬಚ್ಚಿಡೋದು ಸುಲಭ ಆಗ್ತಿರಲಿಲ್ವೆ?' - ಅಪರೂಪಕ್ಕೊಮ್ಮೆ ಮಗನ ವಿವೇಕದ ಪ್ರಶ್ನೆ.

'ಅಮ್ಮ ಹೇಗೆ ಬಚ್ಚಿಡಬಹುದು ನಾನು ಹೇಳುತೀನಿ. ನನ್ನ ಫ್ರೆಂಡು ಅನನ್ಯ ಮನೆ ಹತ್ತಿರ ತುಂಬಾ ಫ್ಲಾಟ್ಸು ಕಟ್ಟುತ್ತಾ ಇದಾರೆ. ಅಲ್ಲಿ ಸುತ್ತಲೂ ದೊಡ್ಡ ದೊಡ್ಡ ನೀಲಿ ಪ್ಲಾಸ್ಟಿಕ್ ಷೀಟುಗಳನ್ನು ಇಳೀಬಿಟ್ಟಿದಾರೆ. ಒಳಗಡೆ ಏನಾಗುತಿದೆ ಅಂತ ಯಾರಿಗೂ ಗೊತ್ತಾಗುಲ್ಲ. ನೀನೇನೂ ಹೇಳುತಿದಿಯಲ್ಲ ಸಿಕ್ರೆಟ್ ಲೇಔಟ್ ಅಂತ ಅಲ್ಲೂ ಸುತ್ತಲೂ ಹೀಗೆ ಷೀಟ್ಸ್ ಹಾಕಿದರೆ ಆಯಿತು' - ಮೊಬೈಲ್ ಲೋಕದಿಂದ ಕ್ಷಣ ಹೊರಗೆ ಬಂದ ಮಗಳ ಬ್ರಿಲಿಯಂಟ್ ಐಡಿಯಾ.

'ಏ ಗುಗ್ಗು ಹಾಗೇನಾದರೂ ಮಾಡಿದರೆ ಮಾರನೆಯ ಬೆಳಿಗ್ಗೆ ಹೊತ್ತಿಗೆ ಒಂದು ಚೂರು ಪ್ಲಾಸ್ಟಿಕ್ಕೂ ಅಲ್ಲಿರೋದಿಲ್ಲ. ಅದನ್ನೆಲ್ಲಾ ಮೆಜೆಸ್ಟಿಕ್‌ನಲ್ಲಿ ಹಾಫ್ ರೇಟಿಗೆ ಮಾರುತ್ತಿರುತ್ತಾರೆ.' ತಂಗಿಯ ಸಲಹೆಗೆ ಅಣ್ಣನ ವಿಟೋ.

ಬುದ್ಧಿವಂತರು ಅದನ್ನೇ ಕೊಂಡುಹೋಗಿ ಅದೇ ಇಲಾಖೆಯೋರಿಗೆ ಸಪ್ಲೈ ಮಾಡಿ ಇನ್ನೊಂದು ಬಿಲ್ ಪಾಸ್ ಮಾಡಿಸ್ಕೋತಾರೇ ಎಂದು ನಾನು ಹೇಳಬಹುದಾಗಿತ್ತು. ಹೆಂಡತಿ ಇನ್ನೇನಾದರೂ ಕೊಂಕು ಹೇಳಬಹುದೆಂದು ಸುಮ್ಮನಿದ್ದೆ.

'ಅಮ್ಮ ನನ್ನದೊಂದು ಐಡಿಯಾ ಕೇಳು. ನೀನೇ ನೋಡಿದಿಯಲ್ಲ. ಖಾಲಿ ಸೈಟು ಇರೋ ಕಡೇಲೆಲ್ಲಾ ಇದು ಇಂತೋರ ಸ್ವತ್ತು ಅಂತ ಬೋರ್ಡ್ ಹಾಕಿರುತ್ತಾರಲ್ಲ. ಈ ಸೀಕ್ರೆಟ್ ಲೇಔಟಿನಲ್ಲಿ ಸುತ್ತಲೂ ಇದು ಇಂತೋರ ಸ್ವತ್ತಲ್ಲ ಎಂದು ಹಾಕಿಸಿದರೆ ಆಯಿತು' - ತಾಯಿಯನ್ನು ಕಾಡುತ್ತಿದ್ದ ಸಮಸ್ಯೆಗೆ ಮಗನ ಸರಳ ಸಮಾಧಾನ.


'ಅಲ್ಲೋ ಕಣೋ ನಮ್ಮನೆ ಮುಂದೆ ಇದು ನಮ್ಮನೆ ಅಂತ ಬರುಕೋಬಹುದು. ಇನ್ನೊಬ್ಬರ ಮನೆ ಮುಂದೆ ನಮ್ಮನೆ ಅಲ್ಲ ಅಂತಾ ಬರುಕೊಳ್ಳೋಕೇ ಆಗುತ್ತೇನೋ?'

‘ಅಲ್ಲೇ ಇರೋದು ನೋಡು ನನ್ನ ಐಡಿಯಾ ಬ್ಯೂಟಿ. ನಮ್ಮನೆ ಮುಂದೆ ಇದು ನಮ್ಮನೆ ಅಂತನೂ ಬರ್ಕೋಬಹುದು.ಇದು ನಮ್ಮನೆ ಅಲ್ಲ ಎಂತ ಬೇಕಾದರೂ ಬರ್ಕೋಬಹುದು ತಾನೇ?’

ಇದಕ್ಕೆ ನನ್ನ ಹೆಂಡತಿ ಏನು ಉತ್ತರ ಕೊಡುತ್ತಿದ್ದಳೊ ಗೊತ್ತಿಲ್ಲ. ಅಷ್ಟರಲ್ಲಿ ಗೇಟ್ ಹೊರಗಿನಿಂದಲೇ ‘ಈ ತಿಂಗಳು ಇನ್ನೊಂದು ಚಾನಲ್ ಪೇ ಆಗಿದೆ, ಇನ್ನು ಇಪ್ಪತ್ತೈದು ರೂಪಾಯಿ ಜಾಸ್ತಿ ಕೊಡಬೇಕು’ ಎಂದು ಕೂಗಿಕೊಂಡು ಕೇಬಲ್ಲಿನವನು ಬಂದ. ಅವನನ್ನು ಟ್ಯಾಕಲ್ ಮಾಡಲು ಅವಳು ಎದ್ದು ಹೋದಳು. ಇಂತಹ ಅವಕಾಶಕ್ಕೆ ಕಾದಿದ್ದ ಮಕ್ಕಳು ತಮ್ಮತಮ್ಮ ರೂಮಿಗೆ ಹೋದರು.

ನಿಮ್ಮ ಮನೆಯವರು ದಡ್ಡರು ಅಂತ ಹೇಳಿ, ಸುಮ್ಮನೆ ಒಪ್ಪಿಕೋತೀವಿ. ಅದನ್ನು ಪ್ರೂವ್ ಮಾಡುಕ್ಕೆ ಇಷ್ಟು ದೊಡ್ಡ ಕತೆ ಹೇಳಿ ಬೋರು ಮಾಡಬೇಕಾಗಿತ್ತೆ ಅಂತ ನೀವು ಕೇಳ್ತೀರೇನೋ. ನಿಜ, ನಾನು ನಮ್ಮ ಮನೆಯವರು ಅತಿ ದಡ್ಡರು ಎಂದೇ ತಿಳಿದಿದ್ದೆ; ಆದರೆ ಈಗ ಸರ್ಕಾರದ ದೊಡ್ಡದೊಡ್ಡ ಹುದ್ದೆಲೀ ಅವರಿಗಿಂತ ದಡ್ಡರೂ ಇದಾರೆ ಎಂದು ತಿಳಿದ ನನ್ನ ಸಂತೋಷ ಇಲ್ಲಿ ನಿಮ್ಮ ಜೊತೆ ಹಂಚಿಕೊಂಡೆ ಅಷ್ಟೆ.

★★★



ಫಂಡು ಕಂಡು...

– ಎಚ್. ಗೋಪಾಲಕೃಷ್ಣ

ಫಂಡು ಕಂಡು ಎನ್ನ ಕೈ ಬಿಡುವುದೇ
ಫಂಡರೀಕಾಕ್ಷ, ಸರ್ವೋತ್ತಮೇ ದೇವೀ

ಬಂಧುಗಳು ಎನಗಿಲ್ಲ ಬದುಕಿನಲಿ ಸುಖವಿಲ್ಲ
ನಿಂದೆಯಲಿ ನೊಂದೆನ್ನೈ ಫಂತಿಜಾಕ್ಷೀ
ತಂದೆ ತಾಯಿಯು ನೀನೇ ಬಂಧುಬಳಗವು ನೀನೇ
ಎಂದೆಂದಿಗೂ ನಿನ್ನೆ ನಂಬಿದೆನೇ ದೇವೀ

ಲಕ್ಷವೊಂದು ಕೋಟಿಯಾಗಿ ಪೈಸೆಗಿಂತ ಕಡೆಯಾಗಿ
ಎಣಿಸಲಾರದ ಭಾರವ ಹೊತ್ತಿಹೆ ನೀನು
ಸಚಿವಾದಿ ಪ್ರಧಾನಿ ವಾದ್ಯ ವನಜ ಸಂಭವನ ಸತಿ
ಕಲಾಗಮ ಶಾಮಿ ಪುಡಾರಿ ವರದೆ ಶ್ರೀ ಮಾತೇ

ಪುಂಢರ ವತ್ಸಲೆ ಎಂಬ ಬಿರುದು ಪೊತ್ತ ಮೇಲೆ
ಪುಂಢರಾಧೀನಳಾಗಿರಬೇಡವೇ
ಮುಕ್ತಿದಾಯಕ ದೇವತೆ ಫಂಡುಮಾತೆ
ಶಕ್ತಿ ನೀನಹಹುದೆಂದು ನಂಬಿದೆನೇ ಮಾತೇ...

(ಕಂಡು ಕಂಡು ನೀ ಎನ್ನ ಕೈಬಿಡುವರೇ...)

(ಫಂಡು ಮಾತೆ ಯಾದರೂ ಆಗಿರಬಹುದು)
(ಫಂಡು ಮಾತೆ ಪುಲ್ಲಿಂಗವೂ ಸ್ತ್ರೀಲಿಂಗವೂ ಹೌದು!
(ದಾಸರು ಕ್ಷಮಿಸಲಿ)

ಹೀಗೂ ಉಂಟೆ

– ಸುಜಾತ ರಾಜಣ್ಣ

ನಾವು ಸೆಲಿಬ್ರಿಟಿ ಹಡಗಿನಲ್ಲಿ ವೆನಿಸ್‌ನಿಂದ ವಿಯನ್ನಾದವರೆಗೆ 2 ವಾರ ಪ್ರವಾಸ ಹೊರಟ ವಿಷಯ ಕಳೆದ ತಿಂಗಳ ಅಪರಂಜಿ ಓದಿದ್ದರೆ ನಿಮಗಾಗಲೇ ತಿಳಿದಿರಬೇಕು. ನಮ್ಮ ಕುಟುಂಬದ 8 ಜನರು ಆಗಲೇ ಬಾರ್ಸೆಲೋನಾಗೆ ಬಂದು ಸೇರಿದ್ದೆವು.

ನನ್ನ ಪತಿ ರಾಜ ಇಂಡಿಯಾ ದೇಶದ ಪ್ರಜೆಯೇ ಆದರೂ ಜರ್ಮನಿ ಅವರಿಗೆ ತುಂಬಾ ಅಚ್ಚುಮೆಚ್ಚು. ಆ ದೇಶದ ಪ್ರತಿಯೊಂದು ಊರು ಅವರಿಗೆ ತಮ್ಮ ಸ್ವಂತ ಊರಿದ್ದಂತೆ. ಬೆಂಗಳೂರಿನಲ್ಲಿ ಇಂಜಿನಿಯರಿಂಗ್ ಡಿಗ್ರಿ ಪಡೆದ ನಂತರ ಮೊದಲು ಹಾರಿದ್ದು ಜರ್ಮನಿಯ ಬರ್ಲಿನ್‌ಗೆ. ಮೊಟ್ಟಮೊದಲ ಬಾರಿ ಸ್ವತಂತ್ರ ಪಡೆದ ಧೀರನಂತೆ. ಮನಸ್ಸಿಗೆ ಬಂದಂತೆ ಯಾವ ಭಾವ-ಬಂಧನವಿಲ್ಲದೆ ಆನಂದದಿಂದ ನಲಿದಾಡಿದ ಮೊದಲ ಊರು ಬರ್ಲಿನ್.

ಹಾಗಾಗಿ ರಾಜ ಯಾವುದೇ ಎಗ್ಗಿಲ್ಲದೆ, ಮುಲಾಜಿಲ್ಲದೆ ಆ ದೇಶದ ಜನರೊಂದಿಗೆ ಬೆರೆತು 4 ವರ್ಷ ಅಲ್ಲಿದ್ದು, ಆ ಜನರ ಕಲ್ಮಶವಿಲ್ಲದೆ ಕರಾರುವಾಕ್ಕಾಗಿ ಮಾತನಾಡುವ ರೀತಿಯ ಕಟ್ಟಾ ಅಭಿಮಾನಿಗಳು. ಆದ್ದರಿಂದ ಇಂದಿಗೂ 45 ವರ್ಷದ ಹಿಂದೆ ಇವರು ಗಳಿಸಿರುವ ಗೆಳೆಯರು ನಮ್ಮೊಡನೆ ಆತ್ಮೀಯವಾಗಿ ಬೆರೆಯುತ್ತಾರೆ. ಭಾರತ ದೇಶಕ್ಕೆ ಬಂದಾಗ ಕೇರ್ ಆಫ್ ರಾಜ ಆಗಿ ತಿಂಗಳುಗಟ್ಟಲೆ ಹಾಯಾಗಿ ನಮ್ಮೊಡನೆ ಇದ್ದು ಬಿಡುತ್ತಾರೆ. ಇವರುಗಳ ಆತ್ಮೀಯತೆ ನನಗೊಂದು ಬಿಡಿಸಲಾಗದ ಕಗ್ಗಂಟು. ಜರ್ಮನ್ ಭಾಷೆಯಲ್ಲಿ ನಿರರ್ಗಳವಾಗಿ ಮಾತನಾಡುವ ರಾಜ ಅವರೆಲ್ಲರಿಗೂ ಅತ್ಯಂತ ಆತ್ಮೀಯ ಗೆಳೆಯ.

ಈ ಬಾರಿ ಬಾರ್ಸೆಲೋನಾಗೆ ನಮ್ಮ ಕುಟುಂಬದ 8 ಜನರೂ ಹೋದಾಗ ರಾಜನ ಗೆಳೆಯ ವಾಲ್ಟರ್‌ಗೆ ನಾವೆಲ್ಲಾ ಬರುವ ವಿಚಾರ ತಿಳಿಸಿದ್ದೆವು. ರಾಜನ ಜರ್ಮನ್ ಗೆಳೆಯ ವಾಲ್ಟರ್ ಕೆಲಸದಿಂದ ವಿಶ್ರಾಂತಿ ಪಡೆದ ನಂತರ ಬಾರ್ಸೆಲೋನಾದಲ್ಲಿ ಬಂದು ನೆಲೆಸಿದ್ದರು. ನಾವು ವಿಮಾನ ನಿಲ್ದಾಣದಲ್ಲಿ ಇಳಿದಾಗ ವಾಲ್ಟರ್ ದಂಪತಿಗಳು ನಮ್ಮನ್ನು ಸ್ವಾಗತಿಸಲು ಕಾದಿದ್ದರು.

ವಾಲ್ಟರ್ ಸುಮಾರು 72 ವರ್ಷದ ಸುದೃಢಕಾಯದ ಆಟಗಾರ ಮೈಕಟ್ಟಿನ, ನೀಲಿ ಕಣ್ಣಿನ, ಸರಸ ಸಜ್ಜನಿಕೆಯ, ಎತ್ತರ ನಿಲುವಿನ ವ್ಯಕ್ತಿ. ಅವರ ಪತ್ನಿ ಮೆಲಿನಾ ಸುಮಾರು 27 ವರ್ಷದ, ಕಪ್ಪು ಕಣ್ಣಿನ, ಮೃದು ಮಾತಿನ, ನಗೆಮೊಗದ ಸುಂದರ ಯುವತಿ. ಅವರ ಮಗಳ ವಯಸ್ಸಿಗಿಂತ ಚಿಕ್ಕವಳಾದ ಮೆಲಿನಾಳನ್ನು ನೋಡಿ ನನಗೆ ದಿಗ್ಭ್ರಮೆ. ಈಕೆ ಅವರ ಎರಡನೆಯ ಹೆಂಡತಿ. ಭದ್ರಾವತಿ ಐರನ್ ಮತ್ತು ಸ್ಟೀಲ್ ಕಂಪನಿಯಲ್ಲಿ ಮೇಲ್ವಿಚಾರಕರಾಗಿ ಕೆಲಸ ಮಾಡಲು ಜರ್ಮನ್ ದೇಶದಿಂದ ನಿಯೋಜಿಸಲ್ಪಟ್ಟವರಲ್ಲಿ ವಾಲ್ಟರ್ ಸಹ ಒಬ್ಬರು. ಹಾಗಾಗಿ 42 ವರ್ಷದ ಹಿಂದೆ ಭದ್ರಾವತಿಗೆ ಬಂದಾಗ ಬೆಂಗಳೂರಿನ ಆಂಗ್ಲೋ ಇಂಡಿಯನ್ ಕುಟುಂಬದ ಓರ್ವ ಯುವತಿಯನ್ನು

ಮದುವೆಯಾಗಿ ಜರ್ಮನಿಗೆ ಕರೆದುಕೊಂಡು ಹೋದರು. ಬೆಂಗಳೂರು, ಅರಸೀಕೆರೆ, ಶಿವಮೊಗ್ಗ, ಹಾಸನ ಇವೆಲ್ಲ ಈಗಲೂ ಇವರ ಮನೋಮಂದಿರದಲ್ಲಿ ವಿಶಿಷ್ಟ ಸ್ಥಾನ ಪಡೆದಿವೆ. ಎಂಟು ವರ್ಷದ ಕೆಳಗೆ ಇವರ ಪತ್ನಿ ತೀರಿಕೊಂಡಾಗ ಅವರ ಇಬ್ಬರು ಮಕ್ಕಳಿಗೂ ಮದುವೆಯಾಗಿತ್ತು. ಒಬ್ಬರೇ ಉಳಿದಾಗ ಮೆಲೀನಾ ಅವರ ಜೊತೆಗಾರ್ತಿಯಾಗಿ, ಆತ್ಮೀಯ ಗೆಳತಿಯಾಗಿ ಅವರ ಜೀವನದಲ್ಲಿ ಬಂದು ಸೇರಿದರು. ಈ ದಂಪತಿಗಳಿಗೆ ರಾಜ ತನ್ನ ಕುಟುಂಬದ 7 ಜನ ಸದಸ್ಯರೊಂದಿಗೆ ಬಂದಿದ್ದು ಅತ್ಯಂತ ಸಂತಸದ ವಿಚಾರವಾಗಿತ್ತು. ನಾವು ಹೋಟೆಲ್ ತಲುಪಿದ ಮೇಲೆ ವಾಲ್ಟರ್ ದಂಪತಿಗಳು ನಮಗೆ ವಿಶ್ರಾಂತಿ ಪಡೆಯಲು ತಿಳಿಸಿ, ಸಂಜೆ ಬಂದು ನಮ್ಮನ್ನು ನೋಡುವುದಾಗಿ ಹೇಳಿ 40 ಮೈಲಿ ದೂರದಲ್ಲಿದ್ದ ಅವರ ತೋಟದ ಮನೆಗೆ ವಾಪಸ್ಸಾದರು. ಸಂಜೆ ಮತ್ತೆ ಬಂದು ಬಾರ್ಸೆಲೋನಾದ ಹೋಟೆಲ್‌ಗೆ ನಮ್ಮನ್ನು ಫ್ಲಮಿಂಗೋ ಜಿಪ್ಸಿ ನೃತ್ಯ ನೋಡಲು ಮತ್ತು ಊಟ ಮಾಡಲು ಕರೆದುಕೊಂಡು ಹೋದರು.

ಮೂರು ವರ್ಷದ ಕೆಳಗೆ ರಾಜ ಮತ್ತು ಅವರ ಇಬ್ಬರು ತಮ್ಮಂದಿರು ಬಾರ್ಸೆಲೋನಾಗೆ ಹೋಗಿದ್ದಾಗ ಇವರ ಮನೆಗೆ ಹೋಗಿದ್ದರು. ಅಲ್ಲಿ ಅಂಜೂರದ ಮರದ ತುಂಬ ಬಿಟ್ಟಿದ್ದ ಹಣ್ಣನ್ನು ಆಸ್ವಾದಿಸಿ ಆನಂದಿಸಿದ್ದರು. ಈ ವಿಷಯವನ್ನು ಈ ಮೂರೂ ಜನ ಸಹೋದರರು ಜ್ಞಾಪಿಸಿಕೊಂಡಾಗ ಈಗಲೂ ಬೇಕಾದಷ್ಟು ಬಿಟ್ಟಿದೆ. ನಾಳೆ ನೀವೆಲ್ಲಾ ತಿನ್ನಬಹುದು ಎಂದರು ವಾಲ್ಟರ್. ರಾಜ ಆ ಹಣ್ಣಿನ ಬಗ್ಗೆ ಹೇಳಿ ಸಾಕಷ್ಟು ನನ್ನ ತಲೆ ತಿಂದಿದ್ದರಿಂದ ನಾನು ಆ ಮರದ ಬಗ್ಗೆ ಉತ್ಸುಕಳಾಗಿದ್ದೆ.

ಮಾರನೆಯ ದಿನ ಮಧ್ಯಾಹ್ನದ ಊಟಕ್ಕೆ ಈ ದಂಪತಿಗಳು ನಮ್ಮನ್ನು ಅವರಲ್ಲಿಗೆ ಆದರದಿಂದ ಆಹ್ವಾನಿಸಿದರು. 2 ಕಾರಿನಲ್ಲಿ ಬಂದು ನಮ್ಮನ್ನು ಅವರ ಮನೆಗೆ ಕರೆದುಕೊಂಡು ಹೋದರು. ಸಂಪ್ರದಾಯದಂತೆ ಕುಡಿಯಲು ತಂಪು ಪಾನೀಯ ಕೊಟ್ಟು ಹಣ್ಣು ತಿನ್ನಲು ತೋಟಕ್ಕೆ ಬನ್ನಿ ಎಂದು ನಮ್ಮೆಲ್ಲರನ್ನು ಕರೆದುಕೊಂಡು ಹೋದರು.

ಆ ಮರ ನೋಡಿ ನಾನು ಆಶ್ಚರ್ಯದಿಂದ ಸ್ತಂಭೀಭೂತಳಾಗಿ ನಿಂತು ಬಿಟ್ಟೆ. ಗಿಡದ ತುಂಬಾ ಜೊಂಪೆಜೊಂಪೆಯಾಗಿ ಹಣ್ಣುಗಳು ನೇತಾಡುತ್ತಿತ್ತು. ಯಾವ ಯಾವ ಹಣ್ಣು ಬೇಕು ಎಲ್ಲಾ ಆ ಮರದಲ್ಲಿ ನೇತಾಡುತ್ತಿತ್ತು.


ಆಗ ಅಂಜೂರದ ಹಣ್ಣಿನ ಕಾಲವಲ್ಲವಾದ್ದರಿಂದ ಗಂಡ-ಹೆಂಡತಿ ಮಾರ್ಕೆಟ್ಟಿನಿಂದ, ಬಾಳೆಹಣ್ಣು, ಕಿತ್ತಲೆ ಹಣ್ಣು, ಸೇಬು, ಪೈನಾಪಲ್, ಪೇರ್, ಕಿವಿ, ಅಂಜೂರ ಮುಂತಾದ ಹಣ್ಣುಗಳನ್ನು ತಂದು ಹಿಂದಿನ ದಿನವೇ ಆ ಅಂಜೂರದ ಮರಕ್ಕೆ ಕಟ್ಟಿದ್ದರು. ಆ ಮರದ ಕೆಳಗೆ ನಮಗೆ ಊಟಕ್ಕೆ ವ್ಯವಸ್ಥೆ ಮಾಡಿದ್ದರು. ಆ ದಂಪತಿಗಳ ಈ ಅಪರೂಪದ ಆತಿಥ್ಯದ ಭಾರ ತಡೆಯಲಾರದೆ ಆ ಮರದ ಕೆಳಗೆ ಕುಸಿದು ಕುಳಿತೆ. ಈ ಸ್ನೇಹದ ಸಂಭ್ರಮ ನೋಡಿ ಸಂತೋಷ ನನ್ನ ಕಣ್ಣಿನಿಂದ ಆನಂದಾಶ್ರುವಾಗಿ ತೊಟ್ಟಿಕ್ಕಿತು.

ಅದೇ ದಿನ ಮಧ್ಯಾಹ್ನ 3 ಘಂಟೆಗೆ ಸೆಲಿಬ್ರಿಟಿ ನೌಕೆಯಲ್ಲಿ ಮೆಡಿಟರೇನಿಯನ್ ಸಮುದ್ರದ ಮೇಲೆ ನಮ್ಮ 2 ವಾರದ ಪ್ರವಾಸ ಇದ್ದಿದ್ದರಿಂದ ಬಿಡಲಾರದೆ ಈ ದಂಪತಿಗಳನ್ನು ಬಿಟ್ಟು ಹೊರಟೆವು. ನಾವು ನೌಕೆ ತಲುಪುವವರೆಗೆ ಕೈ ಬೀಸುತ್ತಾ ನಿಂತಿದ್ದ ಈ ದಂಪತಿಗಳ ಸ್ನೇಹ ನಮ್ಮೆಲ್ಲರನ್ನೂ ಮೂಕರನ್ನಾಗಿಸಿತ್ತು.

ಅತ್ಯಂತ ಸಂತಸದಿಂದ 2 ವಾರದ ನಮ್ಮ ನೌಕಾ ಪ್ರವಾಸ ಪ್ರಾರಂಭವಾಯಿತು. ಪ್ರತಿದಿನ ಒಂದೊಂದು ದೇಶ. ಸ್ಪೈನ್, ಫ್ರಾನ್ಸ್, ಮೊನಾಕೋ, ಇಟಲಿ, ಕ್ರವೋಶಿಯಾ, ಗ್ರೀಸ್, ಆಸ್ಟ್ರಿಯಾ ನೋಡಿದೆವು. ರಾತ್ರಿಯೆಲ್ಲಾ ಪ್ರಯಾಣಿಸುತ್ತಾ ಬೆಳಿಗ್ಗೆ ಬೇರೆ ಊರಿನಲ್ಲಿ ನೌಕೆ ನಿಂತಾಗ ಹೊರಗೆ ಹೋಗಿ ಊರು ನೋಡಿ ರಾತ್ರಿ 8 ಘಂಟೆಗೆ ನೌಕೆಗೆ ವಾಪಸ್ಸು ಬರುತ್ತಿದ್ದೆವು. ನೌಕೆಯಲ್ಲಿ ಊಟ, ತಿಂಡಿ, ಉಪಚಾರ ಅತ್ಯಂತ ಶ್ರೀಮಂತವಾಗಿತ್ತು. ಪ್ರತಿಯೊಂದು ವ್ಯವಸ್ಥೆಯಲ್ಲೂ ಶಿಸ್ತು ತಾನೇ ತಾನಾಗಿ ವಿಜೃಂಭಿಸುತ್ತಿತ್ತು. ರಾತ್ರಿಯ ಊಟವಂತೂ ಕಣ್ಣಿಗೆ ಅತ್ಯಂತ ರಮ್ಯ. ನಾಲಿಗೆಗೆ ತುಂಬಾ ರುಚಿ. ಒಂದೊಂದು ಮೇಜಿಗೂ ಮೂರು ಜನ ಆದರಿಸುವವರು. ಕೆಲವೇ ಜನ ಭಾರತೀಯರಿದ್ದರೂ ಅವರಿಗಾಗಿಯೇ ಭಾರತೀಯ ಅಡಿಗೆಯವರಿಂದ ವಿಶೇಷ ಭಕ್ಷ್ಯಗಳು. ಏನು ಬೇಕಾದರೂ ಎಷ್ಟು ಸಲ ಬೇಕಾದರೂ ತಿನ್ನಬಹುದಾಗಿತ್ತು. ಬೆಳಿಗ್ಗೆ 6 ಘಂಟೆಯಿಂದ ಮಧ್ಯರಾತ್ರಿ 2 ಘಂಟೆಯವರೆಗೆ ಊಟೋಪಚಾರ. 12 ಅಂತಸ್ತಿನ ನೌಕೆಯಲ್ಲಿ ಪ್ರತಿಯೊಂದು ಅಂತಸ್ತಿನಲ್ಲೂ ತಿನ್ನಲು ಕುಡಿಯಲು ಅಚ್ಚುಕಟ್ಟಾದ ವ್ಯವಸ್ಥೆ. ಆದರೆ ವಿಸ್ಕಿ, ವೈನ್ ಮೊದಲಾದ ಪಾನೀಯಗಳನ್ನು ಮಾತ್ರ ಖರೀದಿಸಬೇಕಾಗುತ್ತಿತ್ತು. ಸಂತೋಷವಾಗಿ ನೌಕಾ ವಿಹಾರ ಮುಗಿಸಿ ವೆನಿಸ್‌ನಲ್ಲಿ ನೌಕೆಯಿಂದ ಹೊರಗೆ ಬಂದೆವು. ಮತ್ತೆ ಮಾರನೆಯ ದಿನ ವಿಯನ್ನಾಗೆ ಹೋಗಿ ಅಲ್ಲಿ ಮೂರು ದಿನ ಎಲ್ಲರೂ ಜೊತೆಯಾಗಿ ಇದ್ದು ಮತ್ತೆ ನಮ್ಮ ನಮ್ಮ ದೇಶಗಳಿಗೆ ವಾಪಸ್ಸು ಹೋಗುವುದೆಂದು ಮೊದಲೇ ತೀರ್ಮಾನವಾಗಿತ್ತು. ವೆನಿಸ್ ಸಮುದ್ರ ತೀರದಲ್ಲಿ ನೌಕೆಯಿಂದಿಳಿದು ವಾಟರ್ ಟ್ಯಾಕ್ಸಿಗಳಲ್ಲಿ ಕುಳಿತು ವೆನಿಸ್ ನಗರದಲ್ಲಿ ಕಾಲಿಟ್ಟಾಗ ಅಲ್ಲಿ ಕಂಡ ದೃಶ್ಯ ನಮ್ಮನ್ನು ಸಂಭ್ರಮಾತಿಶಯದಿಂದ ಭ್ರಮಾಧೀನರನ್ನಾಗಿಸಿತು. ವಾಲ್ಟರ್ ಮತ್ತು ಮೆಲಿನಾ ದಂಪತಿಗಳು ನಮ್ಮನ್ನು ಸ್ವಾಗತಿಸಲು ಬಾರ್ಸೆಲೋನಾದಿಂದ ಬಂದು ವೆನಿಸ್‌ನಲ್ಲಿ ಕಾದು ನಿಂತಿದ್ದರು.

''ನಿಮ್ಮೆಲ್ಲರನ್ನೂ ಮತ್ತೆ ನೋಡುವುದು ಇನ್ನೆಷ್ಟು ವರ್ಷಗಳ ನಂತರವೋ ಹಾಗಾಗಿ ಈ ಒಂದು ದಿನವನ್ನು ನಿಮ್ಮೆಲ್ಲರೊಡನೆ ಸಂತೋಷವಾಗಿ ಕಳೆಯಬೇಕೆಂದು ಇಲ್ಲಿಗೆ ಬಂದೆವು. ನೀವು ನಮ್ಮ ಪರಮಾಪ್ತರು'' ಎಂದರು ವಾಲ್ಟರ್.

ಹೀಗೂ ಉಂಟೆ ಎಂದು ವಿಸ್ಮಯ ಪಟ್ಟೆ.



ಗಗನ ಯಾತ್ರಿ

Mailing Date 5th of every month
Reg. No.: CPMG/KA/BGW-544/2003-05

Mallige Medical Centre

31/32, Crescent Road, Bangalore 560 001.
Phone: 2203333



Mahabodhi Mallige Hospital

T. Mariappa Road, Siddapura,
Jayanagar, Bangalore 560 011.
Phone: 6565678

Fax: 91-80-2265298 E-mail: info@mallige.com
Web: http://www.mallige.com

Printed by V.R NATH for the Publisher KORAVANJI APARANJI TRUST. Published by KORAVANJI APARANI TRUST, 36, 6th Main Road, Malleswaram, Bangalore - 560 003. PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010.
Editor : M. SHIVAKUMAR